# ಜೆಎಸ್ಎಸ್ ಮಾಸಪತ್ರಿಕೆ

ಜೆಎಸ್ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 77 ಏಪ್ರಿಲ್ 2009




ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ದುಬೈನಲ್ಲಿ ಜೆಎಸ್ಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಉದ್ಘಾಟನೆ ಮಾಡುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀಗಳವರು, ಶ್ರೀ ಬಾಲಗಂಗಾಧರನಾಥ ಸ್ವಾಮಿಜಿಯವರು, ಶ್ರೀ ಸಿದ್ಧಲಿಂಗ ಮಹಾಸ್ವಾಮಿಜಿಯವರು, ಮತ್ತಿತರ ಗಣ್ಯರನ್ನು ಕಾಣಬಹುದು

## ರಾಷ್ಟ್ರನಿರ್ಮಾಣಕ್ಕೆ ಬೇಕಾದಂಥ ಶಿಕ್ಷಣ ಅಗತ್ಯವಿದೆ - ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

"ರಾಷ್ಟ್ರವನ್ನು ಕಟ್ಟಲು ಅಗತ್ಯವಾದ ಶಿಕ್ಷಣವನ್ನು ನೀಡುವ ಅವಕಾಶಗಳನ್ನು ಇಂದು ಕಲ್ಪಿಸಬೇಕಾಗಿದೆ. ಇಂದು ನಾವು ಮೌಲ್ಯಾಧಾರಿತ ಶಿಕ್ಷಣವನ್ನು ನೀಡಬೇಕಾಗಿದೆ. ಯುವಕರಲ್ಲಿ ಉದ್ಬೋಧಕವಾದ ಭಾವನೆಗಳನ್ನು ತುಂಬಲು ಅಗತ್ಯವಾದ ಶಿಕ್ಷಣ ನೀಡಬೇಕಿದೆ" ಎಂದು ಭಾರತದ ಮಾಜಿ ರಾಷ್ಟ್ರಪತಿ ಡಾ. ಕಲಾಂರವರು ತಿಳಿಸಿದರು. ಅವರು ಮಾರ್ಚ್ 30 ರಂದು ದುಬೈನಲ್ಲಿ ಜೆಎಸ್ಎಸ್ ಅಂತಾರಾಷ್ಟ್ರೀಯ ಶಾಲೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಿಕ್ಷಣ ಸಚಿವ ಡಾ. ಹನೀಫ್ ಹಸನ್ ಅಲ್ ಕಾಸಿಮಿಯವರು ಮಾತನಾಡಿ, ದುಬೈನಲ್ಲಿ ಎಲ್ಲರಿಗೂ ಉತ್ತಮ ಶಿಕ್ಷಣ ದೊರೆಯುತ್ತಿದ್ದು, ಜೆಎಸ್ಎಸ್ ಸಂಸ್ಥೆಗೆ ಎಲ್ಲರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಮ್ಮ ಅನುಗ್ರಹ ಭಾಷಣದಲ್ಲಿ" ಭಾರತೀಯ ಶಿಕ್ಷಣ ಪದ್ಧತಿ ಜಗತ್ತಿನಾದ್ಯಂತ ಮನ್ನಣೆ ಪಡೆದಿದೆ. ಅಂತಹ ಶಾಲೆಯೊಂದನ್ನು ಈಗ ದುಬೈನಲ್ಲಿ ಸ್ಥಾಪಿಸಲಾಗುತ್ತಿದ್ದು ಇಲ್ಲಿ ಕಲೆ, ಸಂಸ್ಕೃತಿ, ಯೋಗ ಇವೆಲ್ಲವನ್ನೂ ಒಳಗೊಂಡಂತೆ ಶಿಕ್ಷಣ ನೀಡಿ ಸುಸಂಸ್ಕೃತ ಯುವಕರನ್ನು ರೂಪಿಸುವ ಪ್ರಯತ್ನ ಮಾಡಲಾಗುತ್ತಿದೆ" ಎಂದರು.

ಸಿರಿಗೆರೆಯ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಮಾತನಾಡಿ, ಶಿಕ್ಷಣದ ಗುರಿ ಕೇವಲ ಜ್ಞಾನಸಂಪಾದನೆ ಅಷ್ಟೇ ಅಲ್ಲ; ಸಮಗ್ರವಾಗಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಾದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ" ಎಂದರು.

ಆದಿಚುಂಚನಗಿರಿ ಶ್ರೀಗಳು, ಸಿದ್ಧಗಂಗಾ ಕಿರಿಯ ಶ್ರೀಗಳು ಹಾಗೂ ಶ್ರೀ ಋಷಿ ಪ್ರಭಾಕರ್ ಗುರೂಜಿಯವರುಗಳು ಈ ಸಂದರ್ಭದಲ್ಲಿ ಮಾತನಾಡಿ, ಜೆಎಸ್ಎಸ್ ಸಂಸ್ಥೆಯು ದುಬೈನಲ್ಲಿ ಅಂತಾರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸುತ್ತಿರುವುದಕ್ಕೆ ಶುಭ ಹಾರೈಸಿದರು. ದುಬೈನಲ್ಲಿ ಭಾರತದ ಕಾನ್ಸುಲೇಟ್ ಜನರಲ್ ಶ್ರೀ ವೇಣು ರಾಜಮಣಿ, ಮೇ.ಜ. ನಾಸರ್ ಅಲ್ ರಜೂಕಿ, ಲೆ.ಜ. ಮುಸಾಬೆ ರಶೀದ್ ಅಲ್ ಫತಾನ್, ಜೆಎಸ್ಎಸ್ ವಿಶ್ವ ವಿದ್ಯಾನಿಲಯದ ಕುಲಪತಿ ಡಾ. ಬಿ. ಸುರೇಶ್ ಮೊದಲಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಸನ್ಮಾನ. ಚಿತ್ರದಲ್ಲಿ ಪ್ರೊ. ಎಸ್.ಪಿ. ಉಮಾದೇವಿ, ಪ್ರೊ. ಅಂಬಳಿಕೆ ಹಿರಿಯಣ್ಣ, ಪೂಜ್ಯ ಶ್ರೀಗಳು, ಪ್ರೊ. ಜಿ.ಕೆ. ಚಂದ್ರಶೇಖರಪ್ಪ, ಪ್ರೊ. ಬಿ.ಎ. ವಿವೇಕ್ ರೈ ಮತ್ತು ಪ್ರೊ. ಮಲ್ಲಿಕಾರ್ಜುನ ಶೆಟ್ಟಿಯವರನ್ನು ಕಾಣಬಹುದು




ಜೆಎಸ್‌ಎಸ್ ಬಾಲಜಗತ್ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಪ್ರೊ. ಕೆ.ಬಿ. ಪ್ರಭುಪ್ರಸಾದ್, ಶ್ರೀಮತಿ ಎಚ್.ಜಿ. ಮಂಜುಳಾ, ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ಶೈಲಜಾ ಅವರನ್ನು ಕಾಣಬಹುದು

**ಜೆಎಸ್‌ಎಸ್ ಪ್ರೌಢಶಾಲೆ**
**ಉಡಿಗಾಲ, ಚಾಮರಾಜನಗರ ತಾಲ್ಲೂಕು**

ಜುಲೈ 2008 ರಲ್ಲಿ ಶಾಲೆಗೆ 25 ವರ್ಷಗಳು ತುಂಬಿದ ಪ್ರಯುಕ್ತ ರಜತ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಅದರ ಅಂಗವಾಗಿ ದಿನಾಂಕ 1.12.2008 ರಂದು ರಜತ ಮಹೋತ್ಸವ ಉದ್ಘಾಟನೆ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭಗಳನ್ನು ನಡೆಸಲಾಯಿತು.

ಹರವೆಯ ಶ್ರೀ ವಿರಕ್ತಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ನಿ.ಪ್ರ.ಸ್ವ. ಶ್ರೀ ಸರ್ಪಭೂಷಣ ಸ್ವಾಮಿಗಳು ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಉಡಿಗಾಲದ ಶ್ರೀ ಗುರುಮಲ್ಲೇಶ್ವರ ಭಿಕ್ಷದ ಮಠದಪೂಜ್ಯ ನಿ.ಪ್ರ.ಸ್ವ. ಶ್ರೀ ಬಸವರಾಜ ಸ್ವಾಮಿಗಳವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎ.ಎಂ. ನಾಗಮಲ್ಲಪ್ಪನವರು ಉಪನ್ಯಾಸಕಾರರಾಗಿ ಆಗಮಿಸಿದ್ದರು. ಉಡಿಗಾಲದ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಸಿ. ಮಹದೇವಸ್ವಾಮಿಯವರು ಮತ್ತು 2008 ನೇ ಸಾಲಿನ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತರಾದ ಅರಕಲವಾಡಿ ಜೆಎಸ್‌ಎಸ್ ಪ್ರೌಢಶಾಲೆಯ ಸಹ ಶಿಕ್ಷಕರಾದ ಶ್ರೀ ಎಂ. ಷಣ್ಮುಖ ಅವರುಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.



ಚಾಮರಾಜನಗರ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀಮತಿ ರತ್ನಮ್ಮ ಬಸವರಾಜು, ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಬೆಳ್ಳಶೆಟ್ಟಿಯವರು, ಉಡಿಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಯವರು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್. ರಾಜಶೇಖರಪ್ಪನವರು, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಶಿವಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ 'ವಚನ ಗಾಯನ ಸ್ಪರ್ಧೆ'ಯನ್ನು ಏರ್ಪಡಿಸಲಾಗಿತ್ತು. ಶಾಲೆಯ 10 ನೆಯ ತರಗತಿ ವಿದ್ಯಾರ್ಥಿನಿಯರಾದ ಕು. ಸಿ. ಪವಿತ್ರ ಮತ್ತು ಕು. ಅಭಿಲಾಷ ಅನುಕ್ರಮವಾಗಿ ಮೊದಲನೆಯ ಹಾಗೂ ಮೂರನೆಯ ಬಹುಮಾನವನ್ನು ಮತ್ತು ಅರಕಲವಾಡಿ ಜೆಎಸ್‌ಎಸ್ ಪ್ರೌಢಶಾಲೆಯ 10 ನೆಯ ತರಗತಿ ವಿದ್ಯಾರ್ಥಿನಿ ಕು. ಮೇಘು ಮೂರನೆಯ ಬಹುಮಾನವನ್ನು ಗಳಿಸಿದ್ದಾರೆ.

ಸಹಶಿಕ್ಷಕ ಶ್ರೀ ಜಿ. ಮಹದೇವಪ್ಪನವರು ಸ್ವಾಗತ ಮಾಡಿದರು; ಶ್ರೀ ಪ್ರಕಾಶ್ ವಂದಿಸಿದರು; ಕಾರ್ಯಕ್ರಮ ನಿರೂಪಣೆಯನ್ನು ಶ್ರೀ ಆರ್.ಎಸ್. ಲಿಂಗರಾಜು ನಿರ್ವಹಿಸಿದರು.

***

ರಜತ ಮಹೋತ್ಸವದ ಅಂಗವಾಗಿ ಶಾಲೆಯಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ (19.12.2008) ಮತ್ತು ಸಮಾರೋಪ ಸಮಾರಂಭಗಳು (20.12.2008) ಶಾಲೆಯ ಆವರಣದಲ್ಲಿ ನಡೆದುವು.

ಚಾಮರಾಜನಗರ ಜಿಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ. ಚಂದ್ರಕಾಂತ್‌ರವರು ದಿನಾಂಕ 19.12.2008 ರಂದು ಸಮಾರಂಭವನ್ನು ಉದ್ಘಾಟಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿರಾವ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಚಾಮರಾಜನಗರ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್.ಬಿ. ತುರುಕನಗೇರಿ, ಸ್ಥಳೀಯ ಬಿಇಓ ಕಚೇರಿಯಲ್ಲಿ ಕ್ರೀಡಾ ಪರಿವೀಕ್ಷಕರಾದ ಶ್ರೀ ಡಿ. ಲಿಂಗರಾಜು ಮತ್ತು ಸ್ಥಳೀಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಕೆ.ಪಿ. ಶಿವಮೂರ್ತಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಈ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಎರಡು ದಿನಗಳ ಕಾಲ ನಡೆದುವು. ಗ್ರಾಮಸ್ಥರು, ಹಳೆಯ ವಿದ್ಯಾರ್ಥಿ ಸಂಘದ

ಪದಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಈ ಕಾರ್ಯಕ್ರಮಗಳಲ್ಲಿ ತುಂಬು ಉತ್ಸಾಹದಿಂದ ಭಾಗವಹಿಸಿದ್ದರು.

ಮೇಲಿನ ಸ್ಪರ್ಧೆಗಳ ಸಮಾರೋಪ ಸಮಾರಂಭವು ದಿನಾಂಕ 20.12.2008 ರಂದು ಚಾಮರಾಜನಗರದ ಕದಳಿ ಮಹಿಳಾ ವೇದಿಕೆಯ ಮುಖ್ಯಸ್ಥರಾದ ಶ್ರೀಮತಿ ಮಾದಲಾಂಬಿಕಾ ನಂಜುಂಡಸ್ವಾಮಿಯವರು ಅಧ್ಯಕ್ಷತೆಯಲ್ಲಿ ನಡೆಯಿತು. ಚಾಮರಾಜನಗರದ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕಿಯಾದ ಶ್ರೀಮತಿ ಎಸ್. ಭಾರತೀಯವರು ಸಮಾರೋಪ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಹಿತವಚನ ನುಡಿದರು. ಚಾಮರಾಜನಗರ ತಾಲ್ಲೂಕು ಸಾಗಡೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಮನೋಹರಮಣಿ ಕೃಷ್ಣಮೂರ್ತಿ, ಸ್ಥಳೀಯ ಜೆಎಸ್‌ಎಸ್ ಮಹಿಳಾ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಎಸ್. ಅಂಬಿಕಾ, ಚಾಮರಾಜನಗರದ ಭಾರತೀಯ ಸಹಕಾರಿ ಬ್ಯಾಂಕಿನ ಸಹಾಯಕ ವ್ಯವಸ್ಥಾಪಕಿ ಶ್ರೀಮತಿ ಎಸ್.ಜೆ. ವನಿತಾ ಇವರುಗಳು ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. □

---

## ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆ ಸರಸ್ವತಿಪುರಂ, ಮೈಸೂರು



ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಶಾಲಾ ವಾರ್ಷಿಕ ಸಂಚಿಕೆ 'ನವಜ್ಯೋತಿ'ಯನ್ನು ಮೈಸೂರು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಬಿ. ಎನ್. ಶಿವರಾಮೇಗೌಡರವರು ಬಿಡುಗಡೆ ಮಾಡಿದರು. ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಸಚಿವ ಶ್ರೀ ಮೃತ್ಯುಂಜಯ ಕುಳೇನೂರ್, ಸಾಮಾನ್ಯ ಶಿಕ್ಷಣ ವಿಭಾಗದ ಉಪನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿರಾವ್, ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿ ಮತ್ತು ಶಿಕ್ಷಕರು ಚಿತ್ರದಲ್ಲಿದ್ದಾರೆ

ಶಾಲೆಯ ವಾರ್ಷಿಕೋತ್ಸವ ಸಮಾರಂಭ ದಿನಾಂಕ 14.2.2009 ರಂದು ನಡೆಯಿತು. ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಮೃತ್ಯುಂಜಯ ಪಿ. ಕುಳೇನೂರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ "ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಬೇಕಾಗುವಂಥ ಶಿಕ್ಷಣವನ್ನು ಪಡೆದು ಸ್ಪಷ್ಟ ಗುರಿಯೊಂದಿಗೆ ಸತತ ಪ್ರಯತ್ನ, ವಿಧೇಯತೆ, ಮತ್ತು ಆಸಕ್ತಿಯಿಂದ ಕಲಿತು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು" ಎಂದರು. ಸಮಾರೋಪ ಭಾಷಣ ಮಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿರಾವ್‌ರವರು ಮಾತನಾಡಿ "ಮನುಷ್ಯನ ಸರ್ವಾಂಗೀಣ ಪ್ರಗತಿಗೆ ಬುದ್ಧಿ ಎಷ್ಟು ಮುಖ್ಯವೋ ದೈಹಿಕ ಸಾಮರ್ಥ್ಯ ಹಾಗೂ ಮಾನವೀಯ ಮೌಲ್ಯಗಳೂ ಅಷ್ಟೇ ಮುಖ್ಯ. ಇವುಗಳನ್ನೆಲ್ಲ ಅಂತರ್ಗತಗೊಳಿಸುವ ಶಕ್ತಿ ವಿದ್ಯೆಗೆ ಮಾತ್ರ ಇದೆ. ಸತತ ಪ್ರಯತ್ನ, ಆತ್ಮವಿಶ್ವಾಸ ಇವುಗಳಿದ್ದರೆ ನಾವು ಎಂತಹ ಮಹತ್ಕಾರ್ಯ ವನ್ನಾದರೂ

ಸಾಧಿಸಬಹುದು. ಭವಿಷ್ಯದ ಸದೃಢ ಸಮಾಜವನ್ನು ನಿರ್ಮಾಣ ಮಾಡಲು ಶಾಲಾ ಹಂತದಲ್ಲೇ ಒಳ್ಳೆಯ ಶಿಕ್ಷಣವನ್ನು ಪಡೆದು ನೀವೆಲ್ಲ ಅತ್ಯುನ್ನತ ಸ್ಥಾನಕ್ಕೆ ಏರಬೇಕು" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಶಾಲಾ ವಾರ್ಷಿಕ ಸಂಚಿಕೆ 'ನವಜ್ಯೋತಿ'ಯನ್ನು ಬಿಡುಗಡೆ ಮಾಡಿದ ಮೈಸೂರು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಬಿ.ಎನ್. ಶಿವರಾಮೇ ಗೌಡರು ಮಾತನಾಡಿ, "ಇಂತಹ ಸಂಚಿಕೆಗಳು ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಸೃಜನಶೀಲತೆಯನ್ನು ಅರಳಿಸಲು ಉತ್ತಮ ಮಾಧ್ಯಮಗಳಾಗಿರುವುದರಿಂದ ವಿದ್ಯಾರ್ಥಿಗಳು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ, ಕ್ರೀಡೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿಯ ವರು ಸ್ವಾಗತ ಮಾಡಿದರು. ಕು. ಶ್ವೇತ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಕು. ಪೂಜಾರವರು ವಂದನಾರ್ಪಣೆ ಮಾಡಿದರೆ, ಕು. ನಿಂದ್ಯಾ ಕಾರ್ಯಕ್ರಮವನ್ನು ನಿರೂಪಿಸಿದರು. ಅನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

**ಜೆಎಸ್‌ಎಸ್ ಪ್ರೌಢಶಾಲೆ, ಕಲ್ಕುಣಿಕೆ**
**ಹುಣಸೂರು ತಾಲ್ಲೂಕು**



ಹುಣಸೂರು ಪುರಸಭೆಯು ಇತ್ತೀಚೆಗೆ ತಾಲ್ಲೂಕಿನ ಎಲ್ಲ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ "ಘನ ತ್ಯಾಜ್ಯ ನಿರ್ವಹಣೆ ಯೋಜನೆಯ ಅನುಷ್ಠಾನದಲ್ಲಿ ವಿದ್ಯಾರ್ಥಿನಿಯರನ್ನು ತೊಡಗಿಸಿಕೊಳ್ಳುವ ಬಗ್ಗೆ" ಎಂಬ ಪ್ರಬಂಧ ಸ್ಪರ್ಧೆಯಲ್ಲಿ ಶಾಲೆಯ ವಿದ್ಯಾರ್ಥಿನಿಯರಾದ ಕು. ರಮ್ಯ ಭಾರತಿ (10 ನೇ ತರಗತಿ) ಮತ್ತು ಕು. ಶ್ರುತಿ (9 ನೇ ತರಗತಿ) ಇವರುಗಳು ಅನುಕ್ರಮವಾಗಿ ದ್ವಿತೀಯ ಬಹುಮಾನ (2,000 ರೂ.ಗಳು) ಮತ್ತು ತೃತೀಯ ಬಹುಮಾನ (1,000 ರೂ.ಗಳು) ಗಳಿಸಿದ್ದಾರೆ.

ಈ ಗ್ರಾಮೀಣ ಪ್ರತಿಭೆಗಳಿಗೆ ಶಾಲಾ ಆಡಳಿತ ವರ್ಗ ಅಭಿನಂದನೆ ಸಲ್ಲಿಸುತ್ತದೆ.

**ಜೆಎಸ್‌ಎಸ್ ಸಹನಾ ಸಮನ್ವಯ ಶಿಕ್ಷಣ ಶಾಲೆ**
**ಸರಸ್ವತಿಪುರಂ, ಮೈಸೂರು**



ಜೆಎಸ್‌ಎಸ್ ಸಹನಾ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ಎಚ್.ವಿ. ಶೇಷಗಿರಿರಾವ್, ಶ್ರೀಮತಿ ಬಿ. ವಿಮಲಾ ಮತ್ತು ಡಾ. ಬಿ.ವಿ. ರವೀಶ್‌ರವರು

ಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ದಿನಾಂಕ 6.3.2009 ರಂದು ವಿಜೃಂಭಣೆಯಿಂದ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ಉಪ ನಿರ್ದೇಶಕರಾದ ಶ್ರೀ ಎಚ್. ವಿ. ಶೇಷಗಿರಿರಾವ್‌ರವರು ವಹಿಸಿದ್ದರು. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶ್ರೀಮತಿ ಬಿ. ವಿಮಲಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ 'ಸಹನಾ' ಶಾಲೆಯ ಮಕ್ಕಳ ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿ, ಈ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೀಮಠವನ್ನು ತುಂಬು ಹೃದಯದಿಂದ ಶ್ಲಾಘಿಸಿದರು. ಇಲಾಖೆಯ ವತಿಯಿಂದ ಮಕ್ಕಳಿಗೆ ದೊರೆಯುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಅವರು ಪೋಷಕರಿಗೆ ಕರೆ ನೀಡಿದರು. ಮತ್ತೊಬ್ಬ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆ.ಆರ್. ಆಸ್ಪತ್ರೆಯ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ

ಡಾ. ಬಿ.ಎನ್. ರವೀಶ್‌ರವರು ಮಕ್ಕಳಲ್ಲಿರುವ ಯಾವ ನ್ಯೂನತೆಯನ್ನೂ ಎತ್ತಿ ಹೇಳದೆ ಅವರಲ್ಲಿ ಅಡಕವಾಗಿರುವ ಪ್ರತಿಭೆಯನ್ನು ಹೊರತರುವ ಕೆಲಸವನ್ನು ಶಾಲೆಗಳು ಮಾಡಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳು ತಯಾರಿಸಿದ್ದ ಚಿತ್ರಪಟಗಳು, ಮಾದರಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಶಂಸಿಸುವುದರ ಜೊತೆಗೆ ಪೋಷಕರು ಈ ಮಕ್ಕಳನ್ನು ಕೂಡ ಸಾಮಾನ್ಯ ಮಕ್ಕಳಂತೆಯೇ ಕಾಣಬೇಕೆಂದು ಮತ್ತು ಅವರ ಏಳಿಗೆಗಾಗಿ ಶ್ರಮಿಸಬೇಕೆಂದು ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಶ್ರೀ ಸಿ.ಎಸ್. ಗುರುರಾಜನ್‌ರವರು ಬಹುಮಾನಗಳನ್ನು ವಿತರಿಸಿ ಇಂಥ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ಶ್ರಮಿಸಬೇಕಾದ ಅವಶ್ಯಕತೆ ಇದೆ ಎಂದು ನುಡಿದರು. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಎಂ.ಡಿ. ಶಿವಬಸಪ್ಪನವರು ಸ್ವಾಗತ ಭಾಷಣ ಮಾಡಿದರು.

ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನವು ನೋಡುಗರ ಮನಸೂರೆಗೊಂಡಿತು. ಶಾಲೆಯ ಮಕ್ಕಳು ಪೋಷಕರು ಹಾಗೂ ಶಿಕ್ಷಕರ ನೆರವಿನೊಂದಿಗೆ 50 ಕ್ಕೂ ಹೆಚ್ಚು ಚಿತ್ರಪಟಗಳು ಮತ್ತು ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಿದರು. ಜೊತೆಗೆ ವೃತ್ತಿತರಬೇತಿಯ ಮೂಲಕ ಮಕ್ಕಳು ತಯಾರಿಸಿದ ಪ್ಲಾಸ್ಟಿಕ್ ಹೂವಿನ ಹಾರಗಳು, ತೋರಣಗಳು ಮೊದಲಾದ ಹಲವು ಬಗೆಯ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಮಕ್ಕಳಲ್ಲಿರುವ ನ್ಯೂನತೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯಾ ನ್ಯೂನತೆಗೆ ಸಂಬಂಧ ಪಟ್ಟಂಥ ವಿವರಗಳು, ನ್ಯೂನತೆಗಳ ಕಾರಣಗಳು, ಲಕ್ಷಣಗಳು ಮತ್ತು ಪರಿಹಾರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಯಿತು. ಮಕ್ಕಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಮನಸೂರೆಗೊಂಡವು.

**ಕಲಾಮೇಳ**

ದಿನಾಂಕ 9.3.2009 ರಂದು ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಶೇಷ ಮಕ್ಕಳು ಮತ್ತು ಸಾಮಾನ್ಯ ಮಕ್ಕಳ ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಕಲಾಮೇಳ'ವನ್ನು ಏರ್ಪಡಿಸಲಾಗಿತ್ತು. ಈ ಕಲಾಮೇಳಕ್ಕೆ ಸಮುಚ್ಚಯದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇಲಾಖೆಯ ಹಲವಾರು ಅಧಿಕಾರಿಗಳು ಆಗಮಿಸಿದ್ದರು. ಸುಮಾರು 200 ಕ್ಕೂ ಹೆಚ್ಚು ಮಕ್ಕಳು, ಶಿಕ್ಷಕರು ಮತ್ತು ಪೋಷಕರು ಇದರಲ್ಲಿ ಭಾಗವಹಿಸಿದ್ದರು. ಮಕ್ಕಳು ನೃತ್ಯಪ್ರದರ್ಶನ, ಚಿತ್ರಕಲೆ, ಹಾಡುಗಾರಿಕೆಗಳ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸಂಸ್ಥೆಯ ವತಿಯಿಂದ ಮಧ್ಯಾಹ್ನ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಕಲಾಮೇಳವನ್ನು ವೀಕ್ಷಿಸಿದವರೆಲ್ಲ ವಿದ್ಯಾರ್ಥಿಗಳ ಕಲಾಪ್ರತಿಭೆಯನ್ನು ಮೆಚ್ಚುವುದರ ಜೊತೆಗೆ ಸಂಸ್ಥೆಯ ಸಹಾಯ, ಸಹಕಾರಗಳನ್ನು ಪ್ರಶಂಸಿಸಿದರು.

**ಜೆಎಸ್‌ಎಸ್ ಸಂಯುಕ್ತ ಪದವಿಪೂರ್ವ ಕಾಲೇಜು ಜಯನಗರ, ಬೆಂಗಳೂರು**

ದಿನಾಂಕ 13.2.2009 ರಂದು ಕಾಲೇಜಿನ ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ, ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಆಚರಿಸಲಾಯಿತು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ವೀರಣ್ಣನವರು ಮತ್ತು ವಾಗ್ಮಿ ಶ್ರೀ ವೈ.ವಿ. ಗುಂಡೂರಾವ್ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಹದೇವರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮುಖ್ಯಅತಿಥಿಗಳ ಭಾಷಣದಲ್ಲಿ ಶ್ರೀ ವೈ.ವಿ. ಗುಂಡೂರಾವ್‌ರವರು ತಿಳಿಹಾಸ್ಯದ ದೃಷ್ಟಾಂತಗಳ ಮೂಲಕ ವ್ಯಕ್ತಿತ್ವ ವಿಕಸನವನ್ನು ಕುರಿತು ಮಾತನಾಡಿದರು. ಸಮಾರೋಪ ಭಾಷಣ ಮಾಡಿದ ಡಾ. ಸಿ. ವೀರಣ್ಣನವರು ಶೈಕ್ಷಣಿಕ ಅಭಿವೃದ್ಧಿಯ ಜೊತೆಜೊತೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಂದ ಮಕ್ಕಳ ಸರ್ವಾಂಗೀಣ ಪ್ರಗತಿಯಾಗುವುದೆಂದು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಪ್ರಾಂಶುಪಾಲರಾದ ಶ್ರೀ ಮಹದೇವರವರು ಕಾಲೇಜಿನ ವಿದ್ಯಾರ್ಥಿಗಳ ಸಾಂಸ್ಕೃತಿಕ ಹಾಗೂ ಕ್ರೀಡಾ ಸಾಧನೆಗಳನ್ನು ಪ್ರಶಂಸಿಸುತ್ತಾ, ಇದರೊಂದಿಗೆ ಉತ್ತಮ ಫಲಿತಾಂಶವನ್ನೂ ಪಡೆದು ಕಾಲೇಜಿಗೆ ಕೀರ್ತಿ ತರಬೇಕೆಂದು ಕರೆ ನೀಡಿದರು.

ಕಾಲೇಜಿನ ಉಪನ್ಯಾಸಕ ವೃಂದದವರು ಇದೇ ಸಂದರ್ಭದಲ್ಲಿ 'ಭಾವಸಂಗಮ' ಎಂಬ ಸುಮಧುರ ಭಾವಗೀತೆಗಳ ಗಾಯನವನ್ನು ನಡೆಸಿಕೊಟ್ಟದ್ದು ವಿಶೇಷವಾಗಿತ್ತು.

ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಪ್ರೇಕ್ಷಕರನ್ನು ರಂಜಿಸಿದರು. ಶ್ರೀ ಎಚ್. ಚಂದ್ರಶೇಖರ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಜೆಎಸ್‌ಎಸ್ ಶಿಶುನಾಳ ಶರೀಫ ಪ್ರೌಢಶಾಲೆ ಉದಯಗಿರಿ, ಮೈಸೂರು



ದಿನಾಂಕ 21.2.2009 ರಂದು ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಎಚ್. ವಿ. ಶೇಷಗಿರಿರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ನಾಗೇಂದ್ರಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು. ಶಾಲೆಯ ವತಿಯಿಂದ ಅವರಿಗೆ ಇದೇ ಸಂದರ್ಭದಲ್ಲಿ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಶ್ರೀ ಬಸವರಾಜಪ್ಪನವರು ವಿದ್ಯಾರ್ಥಿಗಳಿಗೆ ಆಕರ್ಷಕವಾಗುವ ರೀತಿಯಲ್ಲಿ ಅನೇಕ ಉಪಕಥೆಗಳನ್ನು ಹೇಳಿ ಭಾಷಣ ಮಾಡಿದರು. ಹಿಂದಿನ ವರ್ಷದ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನಗಳನ್ನು ವಿತರಿಸಲಾಯಿತು. ಶಾಲೆಯಲ್ಲಿ ನಡೆದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರಾಮಣ್ಣನವರು ಅತಿಥಿಗಳನ್ನು ಪರಿಚಯಿಸಿದರು.

ಶ್ರೀ ಮಹದೇವಪ್ಪನವರು ಸ್ವಾಗತಿಸಿದರು. ಶ್ರೀ ಶೇಖರ್‌ರವರು ವಾರ್ಷಿಕ ವರದಿಯನ್ನು ಓದಿದರು. ಶ್ರೀಮತಿ ಸುಮಂಗಲರವರು ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿದರು. ಶ್ರೀ ರಾಜು ರವರು ವಂದನಾರ್ಪಣೆ ಮಾಡಿದರು. ಶ್ರೀ ವೇಣುಗೋಪಾಲ್ ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ನಂಜನಗೂಡು

"ವಿದ್ಯಾರ್ಥಿಗಳಲ್ಲಿ ವೈಚಾರಿಕ ಪ್ರಜ್ಞೆ ಅವಶ್ಯಕ. ಇತಿಹಾಸದ ಆರಂಭದ ದಿನಗಳಿಂದಲೂ ಭಯೋತ್ಪಾದನೆ ಸಮಾಜದಲ್ಲಿ ವ್ಯಕ್ತಾವ್ಯಕ್ತವಾಗಿ ಕಂಡುಬರುತ್ತಲೇ ಇದೆ. ಪ್ರತಿಭಟನೆಯ ಕರಾಳ ಸ್ವರೂಪವೇ ಭಯೋತ್ಪಾದನೆ" ಎಂದು ದಿನಾಂಕ 7.2.2009 ರಂದು ಎನ್‌ಎಸ್‌ಎಸ್ ಸಹಯೋಗದೊಡನೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆ ಸಪ್ತಾಹ'ದ ಸಮಾರಂಭದಲ್ಲಿ ಉಪನ್ಯಾಸಕರಾಗಿ ಆಗಮಿಸಿದ್ದ ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರೊ. ಭೀಮಣ್ಣನವರು ಅಭಿಪ್ರಾಯಪಟ್ಟರು. "ಚಿಂತನಾಶಕ್ತಿ ಹಾಗೂ ಸಹನಶಕ್ತಿಗಳು ಮನಸ್ಸಿಗೆ ತನ್ನನ್ನು ತಾನು ವಿಮರ್ಶಿಸಿಕೊಳ್ಳುವ ಅವಕಾಶ ನೀಡುತ್ತದೆ. ಎಲ್ಲಾ ಧರ್ಮಗಳಿಗಿಂತ ಮಾನವಧರ್ಮ ದೊಡ್ಡದು. ಅದರ ಪರಿಪಾಲನೆ ಭಯೋತ್ಪಾದನೆಯ ನಿವಾರಕ ಮಂತ್ರಗಳಲ್ಲೊಂದು. ಸಂವಿಧಾನಕ್ಕೆ ಪೂರಕವಾದ ನಡವಳಿಕೆ ಮತ್ತೊಂದು ತಾರಕಮಂತ್ರ. ಮತ್ತೊಬ್ಬರ ಭಾವನೆಗಳಿಗೆ



ಗೌರವ ನೀಡುವ ಮೂಲಕ ಭಯೋತ್ಪಾದನೆಯನ್ನು ನಿಯಂತ್ರಿಸುವ ಅವಶ್ಯಕತೆಯಿದೆ. ಅತಿಯಾದ ಜನಸಂಖ್ಯೆ, ನಿರುದ್ಯೋಗ, ರಾಜಕೀಯ ಅಸ್ಥಿರತೆ ಇವೆಲ್ಲವೂ ಭಯೋತ್ಪಾದನಾ ಕೃತ್ಯಗಳಿಗೆ

ಮೂಲವಾಗಿದೆ" ಎಂದ ಪ್ರೊ. ಭೀಮಣ್ಣನವರು ಭಯೋತ್ಪಾದನೆಯ ಕಾರಣಗಳು ಹಾಗೂ ಪರಿಹಾರ ಮಾರ್ಗಗಳನ್ನು ವೈಜ್ಞಾನಿಕವಾಗಿ ವಿವರಿಸಿದರು. ಪದವಿ ವಿಭಾಗದ ಪ್ರಾಂಶುಪಾಲರಾದ ಪ್ರೊ. ಎಸ್. ರತ್ನಶೇಖರ ಹಾಗೂ ಪದವಿಪೂರ್ವ ವಿಭಾಗದ ಪ್ರಾಂಶುಪಾಲರಾದ ಶ್ರೀ ಎ.ಪಿ. ಮಹದೇವಪ್ಪನವರು, ಎನ್‌ಎಸ್‌ಎಸ್ ಅಧಿಕಾರಿಯವರಾದ ಪ್ರೊ. ಎಲ್. ಬಾಲ ಕುಮಾರ್, ಪ್ರೊ. ಎಂ.ಎಂ. ಮೋಹನರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿವೃಂದ ಇವರೆಲ್ಲರೂ ಭಾಗವಹಿಸಿದ್ದ ಈ ಸಮಾರಂಭದಲ್ಲಿ ಕು. ಬಿಂದುಶ್ರೀ ಪ್ರಾರ್ಥಿಸಿದರು; ಶ್ರೀ ಮಹದೇವಸ್ವಾಮಿಯವರು ಸ್ವಾಗತಿಸಿದರು ; ಪ್ರೊ. ಸದಾಶಿವಮೂರ್ತಿಯವರು ವಂದಿಸಿದರು ಮತ್ತು ಪ್ರೊ. ಮೋಹನರವರು ಕಾರ್ಯಕ್ರಮ ನಿರೂಪಿಸಿದರು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೆರಿಯರ್ ಫೋರಂ ಲಿಮಿಟೆಡ್ ವತಿಯಿಂದ ದಿನಾಂಕ 12.2.2009 ರಂದು "ಉದ್ಯೋಗ ಅವಕಾಶಗಳು ಹಾಗೂ ಎಂ.ಬಿ.ಎ. ಕೋರ್ಸು" ಎಂಬ ವಿಷಯವಾಗಿ ಕಾಲೇಜಿನ ಉದ್ಯೋಗ ಮಾಹಿತಿ ಕೇಂದ್ರದ ಆಶ್ರಯದಲ್ಲಿ, ವಿಶೇಷ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಕೆ.ಯು. ಮನೋಜ್ ಕುಮಾರ್ ಹಾಗೂ ಶ್ರೀಮತಿ ಸುಭಾಷಿಣಿ ಹರೀಶ್‌ರವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಉದ್ಯೋಗ ಮಾಹಿತಿ ಕೇಂದ್ರದ ಸಂಚಾಲಕರಾದ ಪ್ರೊ. ಲೋಕೇಶಮೂರ್ತಿಯವರು ಸ್ವಾಗತಿಸಿದರು. ಪ್ರೊ. ಉಮಾದೇವಿ ವಂದಿಸಿದರು. ಕು. ಬಿಂದುಶ್ರೀ ಪ್ರಾರ್ಥಿಸಿದರು.

**ಸಾಧನೆಗಳು**

ಮೈಸೂರಿನ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ದಿನಾಂಕ 18.2.2009 ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯ ಚಾಮರಾಜ ವಲಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಾಲೇಜಿನ ಗುರುಮಂಜೇಶ್ ಮತ್ತು ತಂಡದವರು ಪ್ರಥಮ ಸ್ಥಾನ ಗಳಿಸಿದ್ದಾರೆ.

***

ದಿನಾಂಕ 19.2.2009 ರಿಂದ 21.2.2009 ರವರೆಗೆ ಮೈಸೂರಿನ ಟೆರೆಷಿಯನ್ ಕಾಲೇಜಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಅಂತರವಲಯ ಅಂತರ ಕಾಲೇಜು ಮಹಿಳಾ ಕ್ರೀಡಾಕೂಟದಲ್ಲಿ ಕು. ದಿವ್ಯ ಮತ್ತು ತಂಡದವರು ಚದುರಂಗ ಪಂದ್ಯದಲ್ಲಿ ಪ್ರಥಮ ಸ್ಥಾನ ಹಾಗೂ ಕು. ರಜನಿ ಮತ್ತು ತಂಡದವರು ಬಾಲ್ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ತೃತೀಯ ಬಿ.ಎ. ತರಗತಿಯ (ಎಚ್.ಇ.ಜಿ.) ಕು. ಎಸ್. ಸವಿತರವರು, ಮೈಸೂರಿನ ಚಾಮರಾಜೇಂದ್ರ ಮೃಗಾಲಯವು ನಡೆಸಿದ ಭಾಷಣ ಸ್ಪರ್ಧೆಯಲ್ಲಿ ತೃತೀಯ ಸ್ಥಾನ, ಮೈಸೂರಿನ ನಟರಾಜ ಕಾಲೇಜಿನಲ್ಲಿ ನಡೆದ ಜಿಲ್ಲಾಮಟ್ಟದ ಚರ್ಚಾಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, ಕನಕಪುರ ಗ್ರಾಮೀಣ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಚರ್ಚಾಸ್ಪರ್ಧೆಯಲ್ಲಿ ಏಳನೇ ಸ್ಥಾನ ಮತ್ತು ಭಯೋತ್ಪಾದನೆ ಜಾಗೃತಿ ಕಾರ್ಯಕ್ರಮದಲ್ಲಿ ನಂಜನಗೂಡು ಪ್ರಥಮ ದರ್ಜೆ ಪದವಿ ಕಾಲೇಜು ನಡೆಸಿದ ಭಾಷಣ ಸ್ಪರ್ಧೆ ಮತ್ತು ಆಶುಭಾಷಣ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ.

**ಜೆಎಸ್‌ಎಸ್ ಪದವಿಪೂರ್ವ ಕಾಲೇಜು ನಂಜನಗೂಡು**

ದಿನಾಂಕ 21.2.2009 ರಂದು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವೇದಿಕೆಗಳ ಸಮಾರೋಪ ಹಾಗೂ "ಸೃಜನ" ಸಂಚಿಕೆ ಬಿಡುಗಡೆ ಸಮಾರಂಭ ಕಾಲೇಜಿನಲ್ಲಿ ನಡೆಯಿತು. ಜಾನಪದ ವಿದ್ವಾಂಸರಾದ ಡಾ. ಪಿ.ಕೆ. ರಾಜಶೇಖರ ಅವರು ಸಮಾರೋಪ ಭಾಷಣ ಮಾಡಿದರು. "ಸೃಜನ" ಸಂಚಿಕೆಯನ್ನು ನಂಜನಗೂಡಿನ ಶ್ರೀ ರಾಮಚಂದ್ರ ಮೆಡಿಟೇಷನ್ ಫೌಂಡೇಷನ್‌ನ ಶ್ರೀ ಸಿ.ವೈ. ನರಸಿಂಹಮೂರ್ತಿಯವರು ಬಿಡುಗಡೆ ಮಾಡಿದರು. ಬಹುಮಾನಗಳ ವಿತರಣೆಯನ್ನು ಪ್ರೊ. ಸಿ.ವಿ. ಬಸವರಾಜು ನೆರವೇರಿಸಿದರು. ಪ್ರಾಂಶುಪಾಲರಾದ ಶ್ರೀ ಎ.ಪಿ. ಮಹದೇವಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಭಾ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿ ಶ್ರೀ ಶಿವರುದ್ರ ಸ್ವಾಮಿ ಪ್ರಾರ್ಥನೆ ಮಾಡಿದರು. ಕನ್ನಡ ಉಪನ್ಯಾಸಕರಾದ ಶ್ರೀ ಡಿ.ಎಂ. ಮಹೇಂದ್ರಮೂರ್ತಿ ಸ್ವಾಗತ ಕೋರಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕು. ಮಮತಾ ವಂದನಾರ್ಪಣೆ ಮಾಡಿದರು.

## ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಗುಂಡ್ಲುಪೇಟೆ



ಗುಂಡ್ಲುಪೇಟೆ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನ ರಜತಮಹೋತ್ಸವ ಕ್ರೀಡಾಕೂಟವನ್ನು ಶಾಸಕರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಸಂಪತ್ತು, ಪ್ರೊ. ಕೆ.ಜಿ. ಪರಮೇಶ್ವರಪ್ಪ, ಶ್ರೀ ಎನ್. ನಾಗರಾಜು ಮತ್ತು ಶ್ರೀ ಜಿ.ಕೆ. ಲೋಕೇಶ್‌ರವರು

ರಜತಮಹೋತ್ಸವ ಕ್ರೀಡಾಕೂಟ ವರ್ಷಾಚರಣೆಯ ಕಾರ್ಯಕ್ರಮದ ಅಂಗವಾಗಿ ದಿನಾಂಕ 6.2.2009 ರಂದು ಚಾಮರಾಜನಗರ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಮತ್ತು ಪದವಿ ಕಾಲೇಜುಗಳ ಬಾಲಕರ ವಾಲಿಬಾಲ್ ಪಂದ್ಯಾವಳಿಯನ್ನು ನಡೆಸಲಾಯಿತು. ಸುತ್ತೂರು ಜೆಎಸ್‌ಎಸ್ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸಂಪತ್ತುರವರು ಪಾರಿವಾಳಗಳನ್ನು ಹಾರಿಬಿಡುವುದರ ಮೂಲಕ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಮಾಜಿ ಸಚಿವರಾದ ಶ್ರೀ ಎಚ್.ಎಸ್. ಮಹದೇವ ಪ್ರಸಾದ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಶ್ರೀ ಎನ್. ನಾಗರಾಜು ಮತ್ತು ಕಾರ್ಯದರ್ಶಿ ಶ್ರೀ ಜಿ.ಕೆ. ಲೋಕೇಶ್ ಆಗಮಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ಜಿ. ಪರಮಶಿವಪ್ಪನವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಸ್ನಾತಕೋತ್ತರ ವಿಭಾಗ, ಚಾಮರಾಜನಗರ

"ವಿದ್ಯಾರ್ಥಿಗಳು ತಾಳ್ಮೆ ಮತ್ತು ಸಮಯಪ್ರಜ್ಞೆಯನ್ನು ಮೈಗೂಡಿಸಿಕೊಂಡು ಅಧ್ಯಯನ ಮಾಡಿದಾಗ ಮಾತ್ರ ಉತ್ತಮ ಜ್ಞಾನಾರ್ಜನೆ ಸಾಧ್ಯವಾಗುತ್ತದೆ" ಎಂದು ಜೆಎಸ್‌ಎಸ್ ಕನ್ನಡ ಸ್ನಾತಕೋತ್ತರ ವಿಭಾಗದ ಅಧ್ಯಾಪಕರಾದ ಡಾ. ರಾಜಶೇಖರ ಜಮದಂಡಿಯವರು ಅಭಿಪ್ರಾಯಪಟ್ಟರು.

ಚಾಮರಾಜನಗರ ಜೆಎಸ್‌ಎಸ್ ಕನ್ನಡ ಸ್ನಾತಕೋತ್ತರ ವಿಭಾಗ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ದಿನಾಂಕ 3.3.2009 ರಂದು ನಡೆದ 'ವಸುದೇವ ಭೂಪಾಲಂ ಅವರ ಬದುಕು-ಬರಹ' ವಿಚಾರ ಸಂಕಿರಣದಲ್ಲಿ ಅವರು ಉಪನ್ಯಾಸ ನೀಡುತ್ತಾ, "ಕಳೆದ 30 ವರ್ಷಗಳ ಕಾಲ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ವಸುದೇವ ಭೂಪಾಲಂರವರು ಸೇವೆ ಸಲ್ಲಿಸಿದ್ದಾರೆ. ಅವರ ಬದುಕು, ತತ್ವ, ಆದರ್ಶ, ಸಿದ್ಧಾಂತಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಭೂಪಾಲಂರವರು ಕೇವಲ ಸಾಹಿತ್ಯದ ವಿದ್ಯಾರ್ಥಿಯಾಗಿರದೆ ಕ್ರೀಡಾ ಚಟುವಟಿಕೆಗಳು ಹಾಗೂ ಸಮಾಜ ಸೇವೆಗಳಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಅವರು ತಮ್ಮ ಕೊನೆಗಾಲದಲ್ಲಿ ಸುಮಾರು 12 ಲಕ್ಷ ರೂಪಾಯಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ದತ್ತಿ ನಿಧಿಯಾಗಿ ನೀಡಿದರಲ್ಲದೆ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಬಹುಮಾನಗಳನ್ನು ಕಲ್ಪಿಸಿದರು" ಎಂದು ಡಾ. ಜಮದಂಡಿಯವರು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎ.ಎಂ. ನಾಗಮಲ್ಲಪ್ಪನವರು ಮಾತನಾಡಿ, ವಿದ್ಯಾರ್ಥಿಗಳು ಕನ್ನಡ ನಾಡು-ನುಡಿಗಳ ಬಗ್ಗೆ ಅಭಿಮಾನ ಹೊಂದಿರಬೇಕೆಂದು ಕರೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್.ಬಿ. ತುರಕನಗೇರಿಯವರು ಮಾತನಾಡಿ, ವಿದ್ಯಾರ್ಥಿಗಳು ಈಗಿನಿಂದಲೇ ಸಾಹಿತ್ಯ ರಚನೆಗೆ ತೊಡಗಿಕೊಳ್ಳಬೇಕು. ಪಾಠ-ಪ್ರವಚನ ಅಧ್ಯಯನದ ಜೊತೆಜೊತೆಗೆ ತಮ್ಮಲ್ಲಿರುವ ಸುಪ್ತ ಪ್ರತಿಭೆಗಳನ್ನು ಅಭಿವ್ಯಕ್ತಿಸಬೇಕೆಂದು ನುಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಪಿ. ಶಿವಮೂರ್ತಿಯವರು, ಉಪನ್ಯಾಸಕರಾದ ಡಾ. ಎಂ. ವಿ. ರವಿ ಹಾಗೂ ಡಾ. ಎನ್. ಮಹೇಶ್ವರಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ವಿದ್ಯಾರ್ಥಿ ಶ್ರೀ. ಕೆ. ಶಿವಕುಮಾರ್ ಅವರಿಂದ ಸ್ವಾಗತ, ಶ್ರೀ ಚಂದ್ರಶೇಖರ್‌ರವರಿಂದ ನಿರೂಪಣೆ, ಕೊನೆಯಲ್ಲಿ ಶ್ರೀ ಮಹಾದೇವಸ್ವಾಮಿಯವರಿಂದ ವಂದನಾರ್ಪಣೆ ನಡೆಯಿತು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಚಾಮರಾಜನಗರ

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯು ಚಾಮರಾಜನಗರ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯ ಸಹಯೋಗದೊಂದಿಗೆ ಸಂತೇಮರ ಹಳ್ಳಿಯಲ್ಲಿ ದಿನಾಂಕ 18.3.2009 ರಂದು ಉಚಿತ ನೇತ್ರ ಪರೀಕ್ಷಾ ಶಿಬಿರವನ್ನು ಏರ್ಪಡಿಸಿತ್ತು. ಈ ಶಿಬಿರದಲ್ಲಿ 104 ಮಂದಿ ನೇತ್ರ ಪರೀಕ್ಷೆ ಮಾಡಿಸಿಕೊಂಡರು. ಇವರ ಪೈಕಿ ಇಪ್ಪತ್ತಾರು




ಮೈಸೂರು ಜೆಎಸ್‌ಎಸ್ ಆಸ್ಪತ್ರೆ, ಚಾಮರಾಜನಗರದ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯ ಸಹಯೋಗದೊಡನೆ ಸಂತೇಮರಹಳ್ಳಿಯಲ್ಲಿ ಏರ್ಪಡಿಸಿದ್ದ ನೇತ್ರ ತಪಾಸಣಾ ಶಿಬಿರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಹುಲಿಮನಿ, ಶ್ರೀ ಮಲ್ಲಿಕಾರ್ಜುನಸ್ವಾಮಿ, ಶ್ರೀ ಕೆ.ಪಿ. ಶಿವಮೂರ್ತಿ ಮುಂತಾದವರು

ಮಂದಿಯನ್ನು ನೇತ್ರ ಶಸ್ತ್ರಚಿಕಿತ್ಸೆ ಮಾಡಲು ಆಯ್ಕೆ ಮಾಡಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕಳುಹಿಸಲಾಯಿತು. ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರಾದ ಡಾ. ಪ್ರಭಾಕರ್‌ರವರ ನೇತೃತ್ವದಲ್ಲಿ ಶಿಬಿರ ಯಶಸ್ವಿಯಾಗಿ ನೆರವೇರಿತು.

ಈ ಶಿಬಿರದಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಡಾ. ಗಜಾನಂದ್, ಡಾ. ದಿವ್ಯಾಂಶ್ ಹಾಗೂ ಸಂತೇಮರಹಳ್ಳಿಯ ಸರ್ಕಾರಿ ಆಸ್ಪತ್ರೆಯ ಡಾ. ಕೃಷ್ಣಪ್ರಸಾದ್ ಮತ್ತು ಬಾಲರಾಜ್ ಹಾಗೂ ಆಸ್ಪತ್ರೆಯ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದು ತಪಾಸಣೆ ಕಾರ್ಯದಲ್ಲಿ ಪೂರ್ಣ ಸಹಕಾರ ನೀಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಹುಲುಮನಿಯವರು ಶಿಬಿರಕ್ಕೆ ಭೇಟಿ ನೀಡಿ ಮಾರ್ಗದರ್ಶನ ನೀಡಿದರು. ಯಳಂದೂರಿನ ಎಸ್.ಡಿ.ವಿ.ಎಸ್. ಶಾಲೆಯ ಸ್ಕೌಟ್ ವಿದ್ಯಾರ್ಥಿಗಳು ಶಿಬಿರಾರ್ಥಿಗಳಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದರು. ದುಗ್ಗಟ್ಟಿ ಗ್ರಾಮದ ಶ್ರೀ ಮಲ್ಲಿಕಾರ್ಜುನಸ್ವಾಮಿ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ.ಪಿ. ಶಿವಮೂರ್ತಿಯವರು ತಪಾಸಣಾ ಸಮಯದಲ್ಲಿ ಹಾಜರಿದ್ದು ಶಿಬಿರದ ಉಸ್ತುವಾರಿ ನೋಡಿಕೊಂಡರು

**ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಚಾಮರಾಜನಗರ**

ಕಾಲೇಜಿನ 2008-09 ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭವು ದಿನಾಂಕ 20.2.2009 ರಂದು ನೆರವೇರಿತು.



ಕಾರ್ಯಕ್ರಮದ ಪ್ರಾರಂಭದಲ್ಲಿ ಕು. ವೈಷ್ಣವಿಯವರು ಪ್ರಾರ್ಥನೆ ಮಾಡಿದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಕಾಲೇಜು ಬೆಳೆದುಬಂದ ಹಾದಿಯ ಕಡೆಗೆ ಹಿನ್ನೋಟ ಹರಿಸಿದರು. ಕು. ಅಂಬಾಶ್ರೀಯವರು ಸಾಂಸ್ಕೃತಿಕ ವೇದಿಕೆಯ ವರದಿಯನ್ನು ಹಾಗೂ ಕು. ದೀಪಿಕಾ ಚಿನ್ನಪ್ಪನವರು ಕ್ರೀಡಾ ವರದಿಯನ್ನು ವಾಚಿಸಿದರು. ಅನಂತರ ಗಣ್ಯರಿಂದ ಬಹುಮಾನ ವಿತರಣೆ ನಡೆಯಿತು.

ಚಾಮರಾಜನಗರದ ಪದವಿಪೂರ್ವ ಮತ್ತು ವೃತ್ತಿಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ರೋಹಿಣಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿದ್ಯಾರ್ಥಿಗಳು ಉತ್ತಮ ನಡೆ-ನುಡಿಗಳನ್ನು ಮೈಗೂಡಿಸಿಕೊಂಡು ಆದರ್ಶ ಪ್ರಜೆಗಳಾಗಬೇಕೆಂದು ಕರೆಕೊಟ್ಟರು. ಮಾತ್ರವಲ್ಲದೆ, ಆಧುನಿಕ ಯುಗದಲ್ಲಿ ಸ್ತ್ರೀಯರಿಗಿರುವ ಅವಕಾಶಗಳು ಮತ್ತು ಅವರ ಹಕ್ಕುಬಾಧ್ಯತೆಗಳನ್ನು ಮನವರಿಕೆ ಮಾಡಿಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಾಮರಾಜನಗರದ ಜಿಲ್ಲಾಧಿಕಾರಿಗಳಾದ ಶ್ರೀ ಮನೋಜ್‌ಕುಮಾರ್ ಮೀನಾರವರು ಕಾಲೇಜಿನ ಗ್ರಂಥಾಲಯಕ್ಕೆ ಭೇಟಿ ಕೊಟ್ಟು, ಅದರ ಅಚ್ಚುಕಟ್ಟುತನವನ್ನು ಶ್ಲಾಘಿಸಿದರು. ಅನಂತರ ಗ್ರಂಥಾಲಯದ ಉಪಯೋಗಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಉತ್ತಮ ಪರಿಸರದಲ್ಲಿ ನಿರ್ಮಿತವಾಗಿರುವ ಈ ಕಾಲೇಜಿನ ಸಂಸ್ಥಾಪಕರ ಶ್ರದ್ಧಾಪೂರ್ಣ ಕಾಳಜಿಯನ್ನು ಪ್ರಶಂಸಿಸಿದರು. ಜಿಲ್ಲಾಧಿಕಾರಿಗಳು ಸಂಪೂರ್ಣವಾಗಿ ಕನ್ನಡದಲ್ಲಿಯೇ ಮಾತನಾಡಿದ್ದು ವಿಶೇಷವಾಗಿತ್ತು.

ಸಮಾರೋಪ ಭಾಷಣಕಾರರಾಗಿ ಆಗಮಿಸಿದ್ದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡಿ "ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಂತಮ್ಮ ಜವಾಬ್ದಾರಿಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಧ್ಯಾಪಕರು ಇಷ್ಟಪಟ್ಟು ಪಾಠ-ಪ್ರವಚನಗಳನ್ನು ಮಾಡಬೇಕು. ವಿದ್ಯಾರ್ಥಿಗಳೂ ಇಷ್ಟಪಟ್ಟು ಅದನ್ನು ಮನನ ಮಾಡಿಕೊಳ್ಳಬೇಕು. ಕಷ್ಟಪಟ್ಟು ಅಲ್ಲ, ಯಾವುದೇ ಕೆಲಸವನ್ನು ಇಷ್ಟಪಟ್ಟು ಮಾಡಿದರೆ ಮಾತ್ರ ಅದು ಅರ್ಥಪೂರ್ಣವಾಗುತ್ತದೆ" ಎಂದು ತಿಳಿಸಿದರು. ಅಧ್ಯಾಪನ ವೃತ್ತಿ ಎಂಬುದು ಪವಿತ್ರವಾದದ್ದು; ಈ ವೃತ್ತಿಯನ್ನು ಕೇವಲ ಹಣಸಂಪಾದನೆಯ ದಾರಿ ಎಂದು ಭಾವಿಸದೆ ನವಸಮಾಜದ ನಿರ್ಮಾಣಕ್ಕೆ ಪಣತೊಡಬೇಕಾದುದು ಅಧ್ಯಾಪಕರ ಕರ್ತವ್ಯ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಂಬಂಧ ಅವಿನಾಭಾವವಾಗಿರಬೇಕೆಂದು ಅವರು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಉಪಸ್ಥಿತರಿದ್ದ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ತುರಕನಗೇರಿಯವರು ಮಾತನಾಡಿ ಸ್ತ್ರೀವಿದ್ಯಾಭ್ಯಾಸದ ಅವಶ್ಯಕತೆಯನ್ನು ತಿಳಿಸಿಕೊಟ್ಟರು. ಸ್ತ್ರೀಯೊಬ್ಬಳು ಕಲಿತರೆ ಇಡೀ ಕುಟುಂಬವೇ ಕಲಿತಂತೆ. ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂದು ನುಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮತ್ತೊಬ್ಬ ಗಣ್ಯರೆಂದರೆ ಕೊಳ್ಳೇಗಾಲದ ಸೆಂಟ್ ಫ್ರಾನ್ಸಿಸ್ ಚರ್ಚ್‌ನ ಫಾ.ಆಲ್ಬರ್ಟ್ ಪಿಂಟೋರವರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಶ್ರೀ ಬಿ.ಬಿ. ವರಪ್ರಸಾದ್, ಕ್ರೀಡಾ ಸಮಿತಿ ಸಂಚಾಲಕರಾದ ಶ್ರೀ ದೇವರಾಜ ಮೂರ್ತಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಮಂಜುನಾಥ್ ಮತ್ತು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷೆ ಕು. ಅಂಬಾಶ್ರೀ ಇವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮಧ್ಯಾಹ್ನ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ನೀಡಿದ ಚಿತ್ತಾಕರ್ಷಕ ಕಾರ್ಯಕ್ರಮಗಳು ಸಮಾರೋಪ ಸಮಾರಂಭಕ್ಕೆ ಶೋಭೆ ತಂದಿತು.

□

---

**ಬೆಳದಿಂಗಳ ಸಂಗೀತ**

9.5.2009 ಶನಿವಾರ ಸಂಜೆ 6.00

ಗಾಯನ

**ಶ್ರೀ ಆರ್. ವಿಜಯಪ್ರಕಾಶ್**

('ಜೈ ಹೋ' ಆಸ್ಕರ್ ಸಂಗೀತ ಪ್ರಶಸ್ತಿ ಖ್ಯಾತಿ)

**ಸ್ಥಳ : ಶ್ರೀ ಸುತ್ತೂರು ಮಠ**

(ಮೈಸೂರು ಶಾಖೆ), ಮೈಸೂರು

## ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಚಾಮರಾಜನಗರ



ಚಾಮರಾಜನಗರ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ವಾರ್ಷಿಕೋತ್ಸವ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಜ್ಯೋತಿ ಬೆಳಗುವ ಹಾಗೂ ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ. ರಾಜಶೇಖರಯ್ಯ, ಡಾ. ಕೆ. ವೀರಭದ್ರಪ್ಪ, ಶ್ರೀಮತಿ ಉಮಾ ಗಜಾನನ ಭಟ್, ಶ್ರೀಮತಿ ಎಸ್. ಜ್ಯೋತಿಯಮ್ಮಾಳ್, ಶ್ರೀ ಎಸ್.ಜಿ. ಶಶಿಧರಕುಮಾರ್ ಮತ್ತು ಶ್ರೀ ಎ. ಚಂದ್ರಪ್ಪ ಅವರು

ದಿನಾಂಕ 31.1.2009 ರಂದು ಶಾಲಾ ವಾರ್ಷಿಕೋತ್ಸವ ಮತ್ತು 2008-09 ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಜ್ಯೋತಿ ಬೆಳಗುವ ಹಾಗೂ ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮ ನಡೆಯಿತು. ಚಾಮರಾಜನಗರ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ. ರಾಜಶೇಖರಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಎ. ಚಂದ್ರಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮೈಸೂರು ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ. ಕೆ. ವೀರಭದ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯ ಶುಶ್ರೂಷಾ ಅಧೀಕ್ಷಕಿ ಶ್ರೀಮತಿ ಉಮಾ ಗಜಾನನ ಭಟ್ ಹಾಗೂ ಪ್ರಾಂಶುಪಾಲರಾದ ಶ್ರೀಮತಿ ಎಸ್. ಜ್ಯೋತಿಯಮ್ಮಾಳ್ ಲೋಕನಾಥನ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಳೆದ ಬಾರಿಯ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಹಾಗೂ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಿಸಲಾಯಿತು.

### ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಚಾಮರಾಜನಗರ

ಮೈಸೂರು ವಿಶ್ವವಿದ್ಯಾನಿಲಯವು ನವೆಂಬರ್/ಡಿಸೆಂಬರ್ ತಿಂಗಳಿನಲ್ಲಿ ನಡೆಸಿದ 2007-08 ನೇ ಸಾಲಿನ ಬಿ.ಇಡಿ. ವಾರ್ಷಿಕ ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿನಿ ಶ್ರೀಮತಿ ಎನ್.ಪಿ. ತೇಜಸ್ವಿನಿಯವರು ಎರಡನೇ ರ್‍ಯಾಂಕ್ ಪಡೆದಿರುತ್ತಾರೆ (838 ಅಂಕಗಳು). ಅವರಿಗೆ ಅಭಿನಂದನೆಗಳು.

### ಜೆಎಸ್‌ಎಸ್ ಅಂಗವಿಕಲರ ಪಾಲಿಟೆಕ್ನಿಕ್, ಮೈಸೂರು

ಸಂಸ್ಥೆಯಲ್ಲಿ ದಿನಾಂಕ 1.2.2009 ರಂದು ಹಿರಿಯ ವಿದ್ಯಾರ್ಥಿಗಳ ಸಭೆ ನಡೆಯಿತು. ಈ ಸಭೆಗೆ 125 ಜನ ಆಗಮಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ಮೈಸೂರಿನ ಎಸ್‌ಜೆಸಿಇ ಕಾಲೇಜಿನ ವಿಶೇಷಾಧಿಕಾರಿಗಳಾದ ಪ್ರೊ. ಬಿ.ಎಸ್. ಬಸವರಾಜಯ್ಯನವರು ವಹಿಸಿದ್ದರು. ಉದ್ಘಾಟನೆಯನ್ನು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಮುಖ್ಯ ಕಾರ್ಯನಿರ್ವಾಹಕರಾದ (ಯೋಜನೆ) ಡಾ. ಎ.ಟಿ. ಭಾಷ್ಯಂರವರು ನೆರವೇರಿಸಿದರು. ಎಸ್‌ಜೆಸಿಇ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಜೆಎಸ್‌ಎಸ್ ಪಿಪಿಎಚ್‌ನ ಪ್ರಾಂಶುಪಾಲರಾದ ಶ್ರೀ ನಂಜುಂಡಸ್ವಾಮಿಯವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಲ್ಲಿ ಹಲವಾರು ಜನ

ಪ್ರತಿಷ್ಠಿತ ಕಂಪನಿಗಳಾದ ಟಾಟಾ ಕನ್ಸಲ್‌ಟೆನ್ಸಿ ಸರ್ವೀಸ್ (ಬೆಂಗಳೂರು), ಇನ್‌ಫೋಸಿಸ್ (ಬೆಂಗಳೂರು), ಎಕ್ಸಲ್ ಸಾಫ್ಟ್ (ಮೈಸೂರು), ಸಿಎಡಿಡಿ ಟೆಕ್ನಾಲಜಿಸ್ (ಮೈಸೂರು), ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ (ತ್ರಿವೇಂಡ್ರಂ), ಬಿಇಎಂಎಲ್ (ಮೈಸೂರು) ಮೊದಲಾದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದು, ಸಭೆಯಲ್ಲಿ ಹಾಜರಿದ್ದ ಕೆಲವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಇನ್ನೂ ಕೆಲವರು ಉನ್ನತ ವ್ಯಾಸಂಗ ಮುಗಿಸಿ ಶಿಕ್ಷಣಸಂಸ್ಥೆಗಳಲ್ಲಿ ಉಪನ್ಯಾಸಕರಾಗಿದ್ದು, ತಮ್ಮ ಸಾಧನೆಗೆ ಕಠಿಣ ಪರಿಶ್ರಮ ಹಾಗೂ ಈ ಸಂಸ್ಥೆಯು ನೀಡಿದ ಪ್ರೋತ್ಸಾಹ ಕಾರಣವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

### ಸುತ್ತೂರು ಶ್ರೀಮಠದಲ್ಲಿ ಪಂಚಾಂಗಶ್ರವಣ

ಪ್ರೊ. ಎಂ.ಸಿ. ಸರೋಜಮ್ಮಣ್ಣಿಯವರು "ಹನ್ನೆರಡನೆಯ ಶತಮಾನದ ಶರಣರು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆ ತರುವ ಮೂಲಕ ಅರ್ಥಪೂರ್ಣವಾಗಿ ಕ್ರಾಂತಿಕಹಳೆ ಮೊಳಗಿಸಿದರು" ಎಂದು ಅಭಿಪ್ರಾಯಪಟ್ಟರು. ಯುಗಾದಿಯ ದಿನದಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಅಲ್ಲಮ ಪ್ರಭುದೇವರ ಜಯಂತಿಯ ಸಂದರ್ಭದಲ್ಲಿ ಉಪನ್ಯಾಸ ನೀಡಿದರು. ಮುಂದುವರಿದು ಅವರು "ಅಲ್ಲಮರ ಪ್ರತಿಯೊಂದು ವಚನ ದಲ್ಲಿಯೂ ರಸಾನುಭವವನ್ನು ಪಡೆಯಬಹುದು. ಸಂಕೇತಗಳ, ಪ್ರತಿಮೆಗಳ ಮೂಲಕ ಅಲ್ಲಮ ಮಾತಿಗೆ ಮೀರಿದ ಭಾವನಿರ್ಭರತೆ ಯನ್ನು ವ್ಯಕ್ತಪಡಿಸಿದ್ದಾರೆ. ಮುಕ್ತಾಯಕ್ಕ, ಸಿದ್ಧರಾಮ ಮೊದಲಾದ ಶರಣರ ಆಧ್ಯಾತ್ಮಿಕ ವಿಕಾಸಕ್ಕೆ ಕಾರಣವಾಗಿದ್ದಾರೆ" ಎಂದರು.

ಸಿದ್ಧಾಂತಿ ಶ್ರೀ ಕೆ.ಜಿ. ಪುಟ್ಟಹೊನ್ನಯ್ಯನವರು ರಚಿಸಿರುವ ವಿರೋಧಿ ನಾಮ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವನ್ನು ಪ್ರೊ. ಗುರುಪಾದ ಕೆ. ಹೆಗಡೆಯವರು ಪರಿಚಯ ಮಾಡಿಕೊಟ್ಟರು. ಸೂರ್ಯಸಿದ್ಧಾಂತ ಹಾಗೂ ದೃಕ್‌ಸಿದ್ಧಾಂತಗಳ ಬಗ್ಗೆ ವಿಶದವಾಗಿ ತಿಳಿಸಿದರಲ್ಲದೆ, ದೃಕ್‌ಸಿದ್ಧಾಂತವು ಹೇಗೆ ಜ್ಯೋತಿಷ್ಯಶಾಸ್ತ್ರಕ್ಕೆ ಹೆಚ್ಚು ಪ್ರಶಸ್ತವಾಗುವುದೆಂಬುದನ್ನು ಉದಾಹರಣೆಗಳ ಮೂಲಕ ತಿಳಿಸಿಕೊಟ್ಟರು. ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗದಲ್ಲಿ ಸಿದ್ಧಾಂತಿ ಶ್ರೀ ಕೆ.ಜಿ. ಪುಟ್ಟ ಹೊನ್ನಯ್ಯನವರು ಈ ಅಂಶಗಳನ್ನು ಸಮರ್ಥವಾಗಿ ನಿರೂಪಣೆ ಮಾಡಿದ್ದಾರೆಂದರು.

### ಜ್ಯೋತಿಷ್ಯ ವಿಜ್ಞಾನವಲ್ಲ

ಪಂಚಾಂಗಪಠಣ ಮಾಡಿದ ಶ್ರೀ ಕೆ.ಜಿ. ಪುಟ್ಟಹೊನ್ನಯ್ಯ ನವರು "ಜೋತಿರ್ವಿಜ್ಞಾನವು ಸಂಪೂರ್ಣ ಅರ್ಥದಲ್ಲಿ ವಿಜ್ಞಾನವಲ್ಲ. ಆದರೆ ಜೋತಿಷ್ಯಕ್ಕೂ ವಿಜ್ಞಾನಕ್ಕೂ ಸಂಬಂಧವಿದೆ. ಸೂರ್ಯಚಂದ್ರರು ಸ್ಥಿರವಾಗಿದ್ದು ಅವುಗಳ ಚಲನೆಯಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ. ಜೋತಿಷ್ಯ ಎಂಬುದು ವಿಜ್ಞಾನವನ್ನು ಮೀರಿದ ಒಂದು ವಿಶೇಷ ಅನುಭವ. ಹಿರಿಯರು ತಿಳಿಸಿರುವಂತೆ ಗ್ರಹಗಳ ಚಲನೆಯು ಬೆಳಕು ಮತ್ತು ನೆರಳಿನ ಆಟವಾಗಿದ್ದು, ಅವುಗಳನ್ನು ವಿಶೇಷ ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ಕರ್ನಾಟಕದಲ್ಲಿ ಹೊರಬರುತ್ತಿರುವ ಪಂಚಾಂಗಗ ಳಲ್ಲಿ ಉಡುಪಿಯ ಅಷ್ಟಮಠ ಗಳೂ ಸೇರಿದಂತೆ ಹೆಚ್ಚಿನವು ದೃಕ್‌ಗಣಿತದ ಆಧಾರದಲ್ಲೇ ರಚಿತವಾಗುತ್ತಿದೆ. ಈ ವರ್ಷ ದೇಶದಲ್ಲಿ ಸುಭಿಕ್ಷೆ ಇರುತ್ತದೆ; ಉತ್ತಮ ಮಳೆ, ಬೆಳೆ ಆಗುತ್ತದೆ. ಭಯೋತ್ಪಾದನೆ ಈ ವರ್ಷ ತಾನಾಗಿಯೇ ಕಡಿಮೆಯಾ ಗುತ್ತದೆ" ಎಂದರು.

ಪಂಚಾಂಗಪಠಣದ ಬಳಿಕ, ರಾಹುಕಾಲ, ಗುಳಿಕಕಾಲ ಇವು ಶುಭಾಶುಭಗಳಿಗೆ ಪೂರಕವೆ ಮಾರಕವೆ; ಜೋತಿಷ್ಯ ವಿಜ್ಞಾನವೆ ಅಲ್ಲವೆ; ಶುಭಕಾರ್ಯಗಳ ಕಾಲ ನಿರ್ಣಯ ಎಂಬುದು ನಿಜವೆ; ಶುಭಲಗ್ನಗಳಲ್ಲಿ ವಿವಾಹವಾಗಿ ವಿಚ್ಛೇದನವಾಗುವುದು, ಯಾವುದೇ ಶುಭಮುಹೂರ್ತ ನೋಡದೆ ಆಗುವ ಮದುವೆಗಳು ಯಶಸ್ವಿಯಾ ಗುವುದಿಲ್ಲವೆ ಇತ್ಯಾದಿ ಅಂಶಗಳ ಬಗ್ಗೆ ಚರ್ಚೆ, ಪ್ರಶ್ನೋತ್ತರ ನಡೆದುವು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಹಲವಾರು ಹರಗುರುಚರಮೂರ್ತಿಗಳು, ಪಿಟೀಲು ವಿದ್ವಾನ್ ಶ್ರೀ ಎಂ. ಮಹದೇವಪ್ಪ, ಮೈಸೂರು ಡಾ. ಎಂ. ಮಂಜುನಾಥ್, ಉಡಿಗಾಲದ ಕುಮಾರಸ್ವಾಮಿ, ನಗರಸಭೆ ಸದಸ್ಯರಾದ ಶ್ರೀ ಎಂ. ಪ್ರದೀಪ್‌ಕುಮಾರ್, ಜನಪದ ಸಾಹಿತಿ ಕ್ಯಾತನಹಳ್ಳಿ ರಾಮಣ್ಣ, ರಾಷ್ಟ್ರೋತ್ಥಾನದ ಯೋಗ ಶಿಕ್ಷಕ ಡಾ. ಕಾಮತ್, ಡಾ. ತಿಮ್ಮಯ್ಯ ಮೊದಲಾದ ಗಣ್ಯರು, ಜ್ಯೋತಿಶಾಸ್ತ್ರದ ಹತ್ತಾರು ಜನ ವಿದ್ಯಾರ್ಥಿಗಳು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಹಸಂಯೋಜನಾಧಿಕಾರಿಗಳಾದ ಶ್ರೀ ತ್ರಿಪುರಾಂತಕರವರು ಕಾರ್ಯಕ್ರಮಕ್ಕೆ ಸ್ವಾಗತಿಸಿ, ನಿರೂಪಣೆ

ಮಾಡಿದರು. ವಿದ್ವಾನ್ ಶ್ರೀ ಮಲ್ಲಣ್ಣನವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಾರಂಭದಲ್ಲಿ ವಿದ್ವಾನ್ ಶ್ರೀ ವೆಂಕಟರಮಣ ಪಿ. ಹೆಗಡೆ ಮತ್ತು ಸಂಗಡಿಗರು ವಚನಗಾಯನ ಮಾಡಿದರು.

ಶ್ರೀ ಶಿವರಾತ್ರೀಶ್ವರ ಗದ್ದುಗೆ ಹಾಗೂ ಶ್ರೀಕ್ಷೇತ್ರದ ಎಲ್ಲಾ ದೇವಸ್ಥಾನಗಳಲ್ಲಿ ಉಗಾದಿಯ ಪ್ರಯುಕ್ತ ವಿಶೇಷ ಪೂಜೆ ಏರ್ಪಡಿಸಲಾಗಿತ್ತು.

**ವೀಣಾ ಬನ್ನಂಜೆಯವರಿಗೆ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ**

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಸ್ಥಾಪಿಸಿರುವ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಪ್ರಸಿದ್ಧ ಲೇಖಕಿ ಶ್ರೀಮತಿ ವೀಣಾ ಬನ್ನಂಜೆ ಅವರಿಗೆ ದಿನಾಂಕ 7.3.2009 ರಂದು ಪ್ರದಾನ ಮಾಡಲಾಯಿತು. ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಪ್ರಶಸ್ತಿ ಪ್ರದಾನ ಮಾಡಿದರು. 25 ಸಾವಿರ ರೂ.ಗಳ ಗೌರವಧನ, ಪ್ರಶಸ್ತಿ ಫಲಕ ಮತ್ತು ಸ್ವಸ್ತಿವಾಚನವನ್ನು ಒಳಗೊಂಡ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ, ಶ್ರೀಮತಿ ವೀಣಾ ಬನ್ನಂಜೆ ಅವರು, "ಪ್ರಶಸ್ತಿಗಾಗಿ ಅರ್ಜಿಗಳನ್ನು ಕರೆಯುವ ಪ್ರವೃತ್ತಿಯಿದ್ದು, ನಾನು ಮೂರು ಕಡೆ ಅರ್ಜಿ ಸಲ್ಲಿಸಿದ್ದೆ. ಅದಕ್ಕೆ ಪ್ರತಿಯಾಗಿ 'ಕಾವ್ಯಾನಂದ ಪ್ರಶಸ್ತಿ' ನನಗೆ ಲಭಿಸಿತು. ಆದರೆ ಆ ಸಂದರ್ಭದಲ್ಲಿ ನನಗೆದುರಾದ ಸನ್ನಿವೇಶಗಳಿಂದ ಮನನೊಂದ ನಾನು ಇನ್ನು ಮುಂದೆ ಪ್ರಶಸ್ತಿಗಾಗಿ ಅರ್ಜಿ ಹಾಕಲೇಬಾರದು ಎಂದು ನಿರ್ಧರಿಸಿದೆ" ಎಂದರು. "ಶಿವರಾತ್ರೀಶ್ವರ ಧಾರ್ಮಿಕ ದತ್ತಿಯು ಯಾವ ಅರ್ಜಿ ಹಾಕದಿದ್ದರೂ ನಾನು ಬರೆದ 'ಅಕ್ಕಮಹಾದೇವಿಯ ದ್ವೈತ' ಎಂಬ ಕೃತಿಯ ಮೂಲಕ ನನ್ನನ್ನು ಗುರುತಿಸಿ 'ಶಿವರಾತ್ರೀಶ್ವರ ಪ್ರಶಸ್ತಿ' ನೀಡಿ ಗೌರವಿಸಿರುವುದು ನನಗೆ ಸಂತಸ ತಂದಿದೆ. ಇದಕ್ಕಾಗಿ ನಾನು ಆಭಾರಿಯಾಗಿದ್ದೇನೆ" ಎಂದ ವೀಣಾ ಬನ್ನಂಜೆ ಆಧ್ಯಾತ್ಮಿಕತೆ ಕುರಿತಂತೆ ತಮ್ಮ ಚಿಂತನೆಯ ಬಗ್ಗೆ ಕೆಲ ಕಾಲ ಮಾತನಾಡಿದರಲ್ಲದೆ, ಮುಂದಿನ ಲೋಕದಲ್ಲೂ ಸಹ ತಮಗೆ ಇಂಥ ಪ್ರಶಸ್ತಿ ಸಿಗಲಿ" ಎಂದು ಹೇಳುತ್ತಾ ಭಾವೋದ್ವೇಗಕ್ಕೊಳಗಾಗಿ ಗದ್ಗದಿತರಾದರು.

ಸುತ್ತೂರು ಶ್ರೀಗಳವರು ಮಾತನಾಡಿ "ಎಲ್ಲ ವಿಮರ್ಶೆಗಳನ್ನೂ ಬಂದಂತೆಯೇ ಸ್ವೀಕರಿಸುವುದು ವೀರಶೈವ ಧರ್ಮ. ವಿಮರ್ಶೆಗೆ ಒಳಗಾಗದ ಧರ್ಮ ಶಾಶ್ವತವಾಗಿ ಉಳಿಯಲಾರದು. ಶ್ರೀಮತಿ ವೀಣಾ ಬನ್ನಂಜೆಯವರ ಕೃತಿಯೂ ಸಹಾ ಅಂಥ ವಿಮರ್ಶೆಗಳನ್ನು ಸ್ವೀಕರಿಸಿ ಗೆದ್ದಿದೆ" ಎಂದು ಪ್ರಶಂಸಿಸಿದರು. ಶಿವರಾತ್ರೀಶ್ವರ ಪ್ರಶಸ್ತಿಯನ್ನು ಕಳೆದ 20 ವರ್ಷಗಳಿಂದ ನೀಡಲಾಗುತ್ತಿದ್ದು ಶ್ರೀಮತಿ ವೀಣಾ ಬನ್ನಂಜೆಯವರು ಈ ಪ್ರಶಸ್ತಿ ಸ್ವೀಕರಿಸಿದ ಎರಡನೇ ಮಹಿಳೆಯಾಗಿದ್ದಾರೆ ಎಂದು ಅವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಹಾಗೂ ವಿಮರ್ಶಕ ಡಾ. ಸಿ.ಎನ್. ರಾಮಚಂದ್ರನ್ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ. ಪ್ರೀತಿ ಶುಭಚಂದ್ರ ಅವರು ವೀಣಾ ಬನ್ನಂಜೆಯವರ ಕೃತಿಗಳ ಬಗ್ಗೆ ಮಾತನಾಡಿದರು. ಪ್ರಕಟಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯನವರು ಸ್ವಾಗತಿಸಿದರು. ಡಾ. ಎಸ್. ಮಾಲತಿಯವರು ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ ರಾಮಾನುಜ ರಸ್ತೆ, ಮೈಸೂರು**

ದಿನಾಂಕ 9.3.2009 ರಂದು ಶ್ರೀ ರಾಜೇಂದ್ರ ಭವನದಲ್ಲಿ 'ಜ್ಞಾನ ಸೌರಭ' ಸಂಚಿಕೆಯ ಬಿಡುಗಡೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳು ಜ್ಯೋತಿಯನ್ನು ಬೆಳಗಿಸಿದರು. ವಿದ್ಯಾರ್ಥಿ ಶ್ರೀ ಕೀರ್ತಿಕುಮಾರ್ ಎಲ್ಲರನ್ನೂ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾಗಿ ಸಮಾರಂಭಕ್ಕೆ ಆಗಮಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯನವರು 'ಜ್ಞಾನ ಸೌರಭ' ಸಂಚಿಕೆಯನ್ನು ಬಿಡುಗಡೆ ಮಾಡಿದರು. ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಪ್ರಭುಪ್ರಸಾದ್‌ರವರು, ಶಾಲೆಯಲ್ಲಿ ನಡೆದ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಮ.ಗು. ಸದಾನಂದಯ್ಯನವರು "ವಿದ್ಯಾರ್ಥಿಗಳು ಶಾಲೆಯ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಈ ಮನೋಭಾವವನ್ನು ನೀವು ಸಣ್ಣ ವಯಸ್ಸಿನಿಂದಲೇ ಬೆಳೆಸಿ ಕೊಂಡರೆ, ಮುಂದೆ ಒಂದು ಸುಂದರವಾದ ಸಾಮಾಜಿಕ ಪರಿಸರವನ್ನು ನಿರ್ಮಿಸಬಹುದು. ಹಾಗೆಯೇ, ಓದಿನ ಜೊತೆಗೆ ನೀವು ಉತ್ತಮ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಮುಂದೆ ಉತ್ತಮ ಪ್ರಜೆಗಳಾಗಿ ಜ್ಞಾನದ ಕಿರಣಗಳನ್ನು ಸೂಸಿ, ಕತ್ತಲನ್ನು ಹೋಗಲಾಡಿಸಬೇಕು" ಎಂದು ಹಿತವಚನ ಹೇಳಿದರು.

ಪ್ರೊ. ಪ್ರಭುಪ್ರಸಾದ್‌ರವರು ತಮ್ಮ ಭಾಷಣದಲ್ಲಿ "ಪ್ರತಿಯೊಂದು ಮಗುವಿನಲ್ಲೂ ಒಂದಲ್ಲ ಒಂದು ಪ್ರತಿಭೆ ಅಡಗಿರುತ್ತದೆ. ಶಾಲಾ ಹಂತದಲ್ಲಿ ಇಂತಹ ಮಕ್ಕಳಿಗೆ ಒಂದು ಅವಕಾಶ ದೊರೆತರೆ ಅವರಲ್ಲಿರುವ ಸುಪ್ತ ಪ್ರತಿಭೆ ಹೊರಬರುತ್ತದೆ. ಪ್ರತಿಯೊಬ್ಬರೂ ಸ್ಪರ್ಧೆಯಲ್ಲಿ ಭಾಗವಹಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಸೋಲು-ಗೆಲುವು ಮುಖ್ಯವಲ್ಲ. ಸೋಲನ್ನು ಸಮಚಿತ್ತದಿಂದ ಸ್ವೀಕರಿಸುವ ಗುಣ ನಿಮ್ಮಲ್ಲಿ ಉತ್ತಮ ವ್ಯಕ್ತಿತ್ವವನ್ನು ನಿರೂಪಿಸುತ್ತದೆ" ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಶೈಲಜಾರವರು ಮಾತನಾಡಿ, "ಒಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದವನು ತನ್ನ ಅವಿರತ ಪ್ರಯತ್ನಗಳ ಮೂಲಕ ಹೇಗೆ ಸಮಾಜದಲ್ಲಿ ಪ್ರಸಿದ್ಧ ವ್ಯಕ್ತಿಯಾದರು ಎಂಬುದಕ್ಕೆ ಎ.ಆರ್. ರೆಹಮಾನ್‌ರವರ ಜೀವನವನ್ನೇ ಉದಾಹರಣೆ ನೀಡಿದರು. ನೀವೂ ಸಹ ಉತ್ತಮ ಪ್ರಯತ್ನದಲ್ಲಿ ತೊಡಗಿ, ಮುಂದೊಂದು ದಿನ ಉತ್ತಮ ವ್ಯಕ್ತಿಗಳಾಗುತ್ತೀರಿ. ಪ್ರಯತ್ನಕ್ಕೆ ತಕ್ಕ ಫಲ ಇದ್ದೇ ಇರುತ್ತದೆ" ಎಂದು ಹೇಳಿದರು.

ವಿದ್ಯಾರ್ಥಿ ಇಬ್ರಾಹಿಂ ಷಾ ವಂದನಾರ್ಪಣೆ ಮಾಡಿದರು. ವಿದ್ಯಾರ್ಥಿನಿಯಾದ ಪ್ರಿಯಾಂಕ ಶೇಖರ್ ಕಾರ್ಯಕ್ರಮದ ನಿರೂಪಣೆ ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು



ಮೈಸೂರು ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಪಿ. ಅರ್ಪಿತಾ, ಎಸ್.ಎನ್. ಕಾರ್ತಿಕ್, ಎಂ. ಮಧು ಮತ್ತು ಎಂ.ಯು. ಹೇಮಂತ್ ಚಿತ್ರದುರ್ಗದ ಸಿರಿಗನ್ನಡ ಪ್ರಕಾಶನದವರು ಏರ್ಪಡಿಸಿದ್ದ ರಾಜ್ಯಮಟ್ಟದ ಸಿರಿಗನ್ನಡ ಪ್ರತಿಭಾ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು. ಚಿತ್ರದಲ್ಲಿ ಮುಖ್ಯೋಪಾಧ್ಯಾಯರು ಹಾಗೂ ಸಹಶಿಕ್ಷಕರು

ಚಿತ್ರದುರ್ಗದ ಸಿರಿಗನ್ನಡ ಪ್ರಕಾಶನದವರು ಏರ್ಪಡಿಸಿದ್ದ ರಾಜ್ಯ ಮಟ್ಟದ "ಸಿರಿಗನ್ನಡ ಪ್ರತಿಭಾ ಪರೀಕ್ಷೆ"ಯಲ್ಲಿ ಶಾಲೆಯ ಕೆಳಕಂಡ ವಿದ್ಯಾರ್ಥಿಗಳು ವಿವಿಧ ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ.

1. ಪಿ. ಅರ್ಪಿತಾ (ರಾಜ್ಯಮಟ್ಟದಲ್ಲಿ 5 ನೇ ರ್‍ಯಾಂಕ್)
2. ಎಸ್.ಎನ್. ಕಾರ್ತಿಕ್ (ಜಿಲ್ಲಾ ಮಟ್ಟದಲ್ಲಿ 4 ನೇ ರ್‍ಯಾಂಕ್)
3. ಎಂ. ಮಧು (ಜಿಲ್ಲಾ ಮಟ್ಟದಲ್ಲಿ 5 ನೇ ರ್‍ಯಾಂಕ್)
4. ಎಂ.ಯು. ಹೇಮಂತ್ (ತಾಲ್ಲೂಕು ಮಟ್ಟದಲ್ಲಿ 3 ನೇ ರ್‍ಯಾಂಕ್)

ಮೈಸೂರು ನಗರದ ದಕ್ಷಿಣ ವಲಯದ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ದಿನಾಂಕ 28.2.2009 ರಂದು ನಡೆದ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಪ್ರಯುಕ್ತ ಆಯೋಜಿಸಲಾಗಿದ್ದ "ಟೆಲಿ ಕಾನ್ಫರೆನ್ಸ್" ನಲ್ಲಿ ಶಾಲೆಯ ವಿದ್ಯಾರ್ಥಿಗಳು ಚಂದ್ರಯಾನ-1 ರ ಪ್ರಾತ್ಯಕ್ಷಿಕೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ಶಿಕ್ಷಕರಾಗಿ ಶಾಲೆಯ ವಿಜ್ಞಾನ ಶಿಕ್ಷಕರಾದ ಶ್ರೀ ಚನ್ನಬಸಪ್ಪನವರು ಭಾಗವಹಿಸಿದ್ದರು. ನಗರಮಟ್ಟದ (ದಕ್ಷಿಣ ವಲಯ) ಶಿಕ್ಷಣ ಸಂಯೋಜಕರಾದ ಶ್ರೀ ಗೋವಿಂದಯ್ಯನವರು ಈ ಸಂದರ್ಭದಲ್ಲಿ ಹಾಜರಿದ್ದರು. ನಗರದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

# ಆಡಂಬರವಿಲ್ಲದ ನಿರಾಡಂಬರತೆಯೇ ದೇಶೀ ಸಂಸ್ಕೃತಿ : ಸುತ್ತೂರು ಶ್ರೀಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯವು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಹಯೋಗದಲ್ಲಿ ಆಯೋಜಿಸಿದ್ದ ದೇಶೀ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಆಡಂಬರವಿಲ್ಲದ ನಿರಾಡಂಬರತೆಯನ್ನು ಕಲಿಸುವುದೇ ದೇಶೀ ಸಂಸ್ಕೃತಿ ಎಂದು ನುಡಿದರು. ರೂಪರಹಿತನಾದ ಭಗವಂತನನ್ನು ಆರಾಧಿಸುವ ಪರಿಕಲ್ಪನೆ ಆರಂಭವಾದುದೇ ನಮ್ಮ ಗ್ರಾಮೀಣರಲ್ಲಿ, ನಂಬಿಕೆಯ ಭದ್ರ ಬುನಾದಿಗಳು, ಬಾಂಧವ್ಯಗಳು ಉಳಿದು ಬೆಳೆದಾಗಲೇ ಜನರಲ್ಲಿ ಪರಸ್ಪರ ಪ್ರೀತಿ, ಗೌರವಗಳು ಬೆಳೆಯಲು ಸಾಧ್ಯವೆಂದರು. ಪ್ರಕೃತಿಯ ಬಗ್ಗೆ ಒಲವು ಕಳೆದುಕೊಳ್ಳುತ್ತಿರುವ ಈ ಆಧುನಿಕ ಕಾಲದಲ್ಲೂ ಕ್ರಯಪತ್ರಗಳ ಒಕ್ಕಣೆಯಲ್ಲಿ 'ಸೂರ್ಯಚಂದ್ರ ಸಾಕ್ಷಿಯಾಗಿ' ಎಂದು ಬರೆಯುವು ದನ್ನು ಕಾಣಬಹುದು.

ಜಾಗತೀಕರಣದ ಬಗ್ಗೆ ಇರುವ ತಪ್ಪು ಕಲ್ಪನೆಗಳು, ಅಂಧಾನುಕರಣೆಯನ್ನು ನಾವು ಗಮನಿಸಬಹುದು. ಬೇರೆ ಸಂಸ್ಕೃತಿಗಳನ್ನು ಮೌಢ್ಯತೆಯಿಂದ ಅನುಕರಿಸುವ ಬದಲಿಗೆ ಸರ್ವರಿಗೂ ಗ್ರಾಹ್ಯವಾಗುವಂತೆ ನಮ್ಮ ಸಂಸ್ಕೃತಿಯನ್ನು ಬೆಳೆಸಬೇಕು. ನಾಗರಿಕತೆಯ ಸೋಂಕಿನಿಂದ ಸಮಾಜವನ್ನು ಬಿಡುಗಡೆಗೊಳಿಸಿ ಅಲ್ಲಿ ದೇಶೀ ಸಂಸ್ಕೃತಿಯನ್ನು ಬೆಳೆಸಬೇಕಿದೆ. ದೇಶೀ ತಿಂಡಿತಿನಿಸುಗಳನ್ನು ತಿನ್ನುವುದನ್ನೂ ನಮ್ಮ ಜನರಿಗೆ ಕಲಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ದೇಶೀ ಸಂಸ್ಕೃತಿಯ ಅಭಿವ್ಯಕ್ತಿಯಾದ ವಿವಿಧ ಜನಪದ ಕಲೆಗಳ ಪ್ರದರ್ಶನವು ಸಮ್ಮೇಳನದಲ್ಲಿ ನಡೆಯಲಿದೆ ಎಂದರು.

ಮೊದಲಿಗೆ ಪ್ರಾಸ್ತಾವಿಕ ನುಡಿಗಳನ್ನಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಹೆಬ್ಬಾಲೆ ಕೆ. ನಾಗೇಶ್‌ರವರು "ಸುತ್ತೂರು ಶ್ರೀಕ್ಷೇತ್ರದಂತಹ ಪ್ರಶಾಂತ ಪವಿತ್ರ ಆವರಣದಲ್ಲಿ ಈ ಸಮ್ಮೇಳನ ನಡೆಯುತ್ತಿರುವುದು ನಮ್ಮೆಲ್ಲರ ಪುಣ್ಯವಿಶೇಷ. ಜಾಗತೀಕರಣ ಭಾರತಕ್ಕೆ ಹೊಸದೇನಲ್ಲ, ವಾಸ್ಕೋಡಿಗಾಮನ ಆಗಮನದೊಂದಿಗೆ ಅದು ಆರಂಭವಾಗಿದೆ. ನಾವು ಅಂದಿನಿಂದಲೂ ಅದನ್ನು ಜಾಣ್ಮೆಯಿಂದಲೇ ಸ್ವೀಕರಿಸಿದ್ದೇವೆ. ಆಲದ ಬಿಳಲಿನಂತೆ ಬೇರು ಬಿಡುತ್ತಿರುವ ಜಾಗತೀಕರಣದ ದುಷ್ಪರಿಣಾಮಗಳನ್ನು ದೂರವಿಡಬೇಕು. ಆದ್ದರಿಂದ ದೇಶೀ ಸಮ್ಮೇಳನಗಳಂತಹ ಕಾರ್ಯಕ್ರಮಗಳ ಮೂಲಕ ನಮ್ಮತನವನ್ನು ಕಾಪಾಡಿಕೊಳ್ಳಬೇಕಾಗಿದೆ" ಎಂದು ನುಡಿದರು. ಹಿರಿಯ ಜಾನಪದ ಕಲಾವಿದರಾದ ಶ್ರೀ ಕಂಸಾಳೆ ಮಹದೇವಯ್ಯನವರಿಗೆ ಈ ಸಂದರ್ಭದಲ್ಲಿ ಸನ್ಮಾನ ಮಾಡಲಾಯಿತು.

ದೇಶೀ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರು, ದೇಶೀ ಸಂಸ್ಕೃತಿಯು ನಿಸರ್ಗವು ನೀಡಿದ ಕೊಡುಗೆಗಳನ್ನು ದೇವರೆಂದು ಭಾವಿಸಿ ಬದುಕುತ್ತದೆ. ಆದರೆ ಆಧುನಿಕತೆಯು ನಿಸರ್ಗವನ್ನು ಅಪವಿತ್ರಗೊಳಿಸಿ ಜಾಲಾಡುತ್ತದೆ. ಆಧುನಿಕತೆಯ ಹುಚ್ಚು ಸಾಹಸದಿಂದಾಗಿ ಮಾನವೀಯತೆಗೆ ಅರ್ಬುದ ಅಂಟಿಕೊಂಡಿದೆ. ಎಲ್ಲರ ಚಿತ್ತ ಈಗ ಹಳೆಯದರತ್ತ ಮತ್ತೆ ಹರಿಯುತ್ತಿದೆ. ಹೊಸ ಹೊಸ ರಸಗೊಬ್ಬರಗಳನ್ನು ಕಂಡುಹಿಡಿದ ವಿಜ್ಞಾನಿಯೇ ಈಗ ಮತ್ತೆ ಸಾವಯವ ಗೊಬ್ಬರದತ್ತ ಮುಖ ಮಾಡಿದ್ದಾನೆ. ಹೊಸದು ಎನ್ನುವುದು ಹಲವು ಸಾರಿ ಹೊಸ ಸಮಸ್ಯೆಯನ್ನು ಸೃಷ್ಟಿಸುವುದೂ ಅನುಭವಕ್ಕೆ ಬಂದಿರುವ ವಿಷಯ.

"ದೇಶಿಯ ಗುಣಲಕ್ಷಣಗಳು ಬದುಕಿಗೆ ಹದ ಮತ್ತು ಮುದ ಕೊಡುತ್ತವೆ. ಅಲ್ಲಿ ಸಿಕ್ಕು ಇಲ್ಲ, ಸೊಕ್ಕು ಇಲ್ಲ, ಸುಕ್ಕು ಇಲ್ಲ, ಅಲ್ಲಿ ಸರಳತೆ ಇದೆ. ಅದೇ ದೇಶಿ" ಎಂದು ದೇಶಿಯ ಸೊಗಡನ್ನು ಬಣ್ಣಿಸಿದರು.

ದೇಶೀ ಸಂಸ್ಕೃತಿಯ ಪೋಷಕರು ಮತ್ತು ಪಾಲಕರು ಹಳ್ಳಿಗಾಡಿನ ಜನರು. ಅವರಿಗೆ ಗೊತ್ತಿದ್ದದ್ದು ಎರಡೇ: ಒಂದು ದೇವರು, ಮತ್ತೊಂದು ದುಡಿಮೆ. ಹಳ್ಳಿಗರ ನಂಬಿಕೆ, ಶ್ರದ್ಧೆ ಇವುಗಳು ಪ್ರಶಂಸನೀಯವಾದುವು" ಎಂದು ನುಡಿದರು.

ಸಮ್ಮೇಳನದ ಸರ್ವಾಧ್ಯಕ್ಷರೂ, ಖ್ಯಾತ ಜಾನಪದ ವಿದ್ವಾಂಸರೂ ಆದ ಪ್ರೊ. ಕಾಳೇಗೌಡ ನಾಗವಾರರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಜೆಎಸ್‌ಎಸ್ ಶಾಲಾ ಮಕ್ಕಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಕಟಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯರವರು ಸ್ವಾಗತಿಸಿದರು. ಕನ್ನಡ ವಿಶ್ವವಿದ್ಯಾಲಯದ ಶ್ರೀ ವೀರೇಶ್ ಉತ್ತಂಗಿಯವರು ಕಾರ್ಯಕ್ರಮ ನಿರೂಪಣೆ ಮತ್ತು ವಂದನಾರ್ಪಣೆಯನ್ನು ನಡೆಸಿಕೊಟ್ಟರು.

## KANNADA-MARATHI SHORT STORY TRANSLATION WORKSHOP AND LITERARY PROGRAMMES

Translation of some thirty Kannada short stories into Konkani and Marathi languages is one of the important projects undertaken by the Central Sahitya Akademi recently. Konkani translation was accomplished at Gadag, Dharwar District while Marathi translation was done at Suttur, Nanjangud Taluk, Mysore District. This programme was held between 8-13 Feb. 2009. The JSS Mahavidyapeetha provided local hospitality to the participants during the workshop. The inaugural function took place on 8.2.2009. Dr. Siddhalinga Pattanashetty, the Convenor of Kannada Committee and Sri A.S. llangovan, Regional Secretary of Sahitya Akademi, Sri H. Gangadharan, Director of JSS Law Studies participated, and, the Convenor of Marathi Committee, Sri Lakshman Gaikwad presided over the function.

Inaugurating the workshop, Sri Gangadharan opined that translation is not just a cerebral activity, but it involves the whole being of a translator and therefore it mingles one culture with another beyond the intention of a mere mechanical taking over from one language to another. Therefore, one realizes the complex nature of this enterprise. He felt happy that such a task is undertaken by the scholars who are bilingual experts. Dr. Siddhalinga Pattanashetty underscored that, though many texts from different languages have come to Kannada, the reverse process is not very encouraging. Since this 'lagging behind' is costly, it must be rectified by scholars without further loss of time. He pointed out that the present workshop is one of the first steps in that direction. Dr. Pattanashetty turned his attention to Vachana literature in general and Shoonyasampadane in particular and inferred that translating them to other languages would certainly go a long way in enriching those languages too. Sri llangovan traced the various programmes chalked out and executed by the Southern Regional Office on behalf of the Akademi. He reiterated that the Akademi's major focus has been on Indian languages owing to the richness contained in them. Sri Lakshman Gaikwad, during his

Presidential Remarks, felt that the vibrancy of the regional languages in the Indian context has already been established and there is a need to transmit that vigour to other languages through translation. R.K. Naik, Uma Kulkarni, Meena Wangikar, Meghana Kulkarni, Ashok Aminabhavi, Sandhya Desh pande, Vinod Gaikwad, Chandra kant Waghmare, Revathi V. Katti and K.N. Deshapande were the participating translators. Since the stories had been made avilable to them earlier, they had come with their translations and during the workshop they had ample opportunities to fine-tune their work so that, at the end of the workshop, they were able to prepare the final version.

The organizers were thoughtful enough to accommodate a multi-lingual Poets' Meet amidst the six-day workshop in which R.V.S. Sundaram, P. Mani, Ravi Subramanian, Adeeb Akhtar, Jayashree Shanbhag, C.N. Srinath, Dharanidevi Malagatti, C. Naganna, Manjunth Latha, K. Sudheendra, Mahadeva Shankanapura and S.P. Umadevi presented their new poems. In a similar manner, some well-known short story writers of Kannada, Madhava Kulkarni, Mogalli Ganesh, Soma shekhara Bisalwadi and Nagamangala Krishnamurthy presented their short stories. Both the Poets' Meet and the short story presentations engaged creatively an appreciative audience of scholars and poetry enthusiasts. The silent and sylvan environs of JSS Guest House, which is far removed from the din of the city, lent positive vibrations to the proceedings.

The workshop drew to a close with the Valedictory Function on 13.2.2009. Gracing the occasion, the Pontiff of Suttur Mutt, Sri Jagadguru Shivarathri Deshikendra Mahaswamiji felt immensely happy that a meaningful activity of cultural exchange had been accomplished successfully at Suttur situated on the river Canvery. He assured the organizers and the participants that the Mutt would readily extend its co-operation in future as well to such projects which bring various cultures on a common platform in a spirit of mutual understanding. Scholars such as T.R.S. Sharma, Siddhalingaiah, Jambukeshwar, M.G. Sadanandaiah, Prabhuswamy and the faculty members of the JSS institutions at Suttur participated in the programme.



ಜೆಎಸ್‌ಎಸ್ ಮಹಾವಿದ್ಯಾಪೀಠವು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಡನೆ ಆಯೋಜಿಸಿದ್ದ ದೇಶಿ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮವನ್ನು ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊ.ರು.ಚನ್ನಬಸಪ್ಪನವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ.ಮುರಿಗೆಪ್ಪ, ಪ್ರೊ. ಕಾಳೇಗೌಡ ನಾಗವಾರ, ಡಾ. ಹೆಬ್ಬಾಲೆ ಕೆ. ನಾಗೇಶ್ ಮತ್ತು ಶ್ರೀ ಕಂಸಾಳೆ ಮಹಾದೇವಯ್ಯನವರು



ಪೂಜ್ಯ ಶ್ರೀಗಳವರು 2007ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಶ್ರೀಮತಿ ವೀಣಾ ಬನ್ನಂಜೆಯವರಿಗೆ ಪ್ರದಾನ ಮಾಡಿದರು. ಪ್ರೊ. ಪ್ರೀತಿ ಶುಭಚಂದ್ರ, ಡಾ. ಸಿ.ಎನ್. ರಾಮಚಂದ್ರನ್ ಮತ್ತು ಶ್ರೀ ಮ.ಗು. ಸದಾನಂದಯ್ಯ ಚಿತ್ರದಲ್ಲಿದ್ದಾರೆ




ಜೆಎಸ್‌ಎಸ್ ಅಂಗವಿಕಲರ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿಗಳ ಸಭೆಯಲ್ಲಿ ಪ್ರೊ. ಬಿ.ಎಸ್. ಬಸವರಾಜಯ್ಯ, ಡಾ. ಎ.ಟಿ. ಭಾಷ್ಯಂ ಡಾ. ಬಿ.ಜಿ. ಸಂಗಮೇಶ್ವರ, ಶ್ರೀ ನಂಜುಂಡಸ್ವಾಮಿಯವರು ಮತ್ತಿತರರು




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ಲಯ-ಲಹರಿ ತಂಡದವರು ನಡೆಸಿಕೊಡುತ್ತಿರುವುದು

ಸಂಪಾದಕ: ಆರ್.ಎಸ್. ಪೂರ್ಣಾನಂದ
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ಭಾಸ್ಕರ್ ಪ್ರಿಂಟರ್ಸ್, ಮೈಸೂರು